# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 184 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 23.01.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 184 • PRGI No:KARKAN/2023/88055 • VIJAYANAGARA • 23.01.2025 • Thursday • Page:04 • Rs:2



Many audiences find print more trustworthy than digital.
Print offers permanence and tangibility that enhance brand credibility and build consumer trust.



1,10,000+
Digital E-PAPER READERS
No.1 HAMPI TIMES LEADING VIJAYANAGARA District News Paper
Contact for Advertisements: 9448633038



ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


**ಮೈಕ್ರೋ ನ್ಯೂಸ್**

## ಜ.24 ರಂದು ನಗರಸಭೆ ಸಾಮಾನ್ಯ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ನಗರಸಭೆಯ ಸಾಮಾನ್ಯ ಸಭೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜ.24 ರಂದು ಬೆಳಗ್ಗೆ 11 ರಿಂದ ನಗರಸಭೆ ಸಭಾಂಗಣದಲ್ಲಿ ನಡೆಯಲಿದೆ ಎಂದು ಪೌರಾಯುಕ್ತರು ತಿಳಿಸಿದ್ದಾರೆ.

## ಜ.27 ರಂದು ತ್ರೈಮಾಸಿಕ ಕೆಡಿಪಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜನವರಿ 27 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

## ಬಿಡಾಡಿ ದನಗಳ ಹಾವಳಿಗೆ ಕಡಿವಾಣ, ಗೋಶಾಲೆಗೆ ರವಾನೆ ಎಚ್ಚರಿಕೆ.

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಬಿಡಾಡಿ ದನಗಳ ಹಾವಳಿ ಹೆಚ್ಚಾಗಿದ್ದು, ಕಡಿವಾಣಕ್ಕಾಗಿ ಸಂಬಂಧಿಸಿದ ಮಾಲಿಕರು ಜ.24 ರೊಳಗಾಗಿ ಬಿಡಾಡಿ ದನಗಳನ್ನು ಕಟ್ಟಿಕೊಳ್ಳದಿದ್ದಲ್ಲಿ ಗೋಶಾಲೆಗೆ ರವಾನಿಸಾಗುವುದು ಎಂದು ನಗರಸಭೆ ಪೌರಾಯುಕ್ತರು ಎಚ್ಚರಿಕೆ ನೀಡಿದ್ದಾರೆ.

ಹೊಸಪೇಟೆ ನಗರದ ಪ್ರಮುಖ ರಸ್ತೆಗಳಲ್ಲಿ ಸಂಡೂರು ರಸ್ತೆ, ವಾಲ್ಮೀಕಿ ಸರ್ಕಲ್, ಎಪಿಎಂಸಿ ಸರ್ಕಲ್, ಬಳ್ಳಾರಿ ರಸ್ತೆ ವೃತ್ತ, ಚಿತವಾಡ್ಗಿ, ದೀಪಾಯನ ಶಾಲೆ ಮುಂಭಾಗ ಆವರಣ, ಆಕಾಶವಾಣಿ ಹತ್ತಿರ,ಅಶೋಕ ಬುಕ್ ಸ್ಟಾಲ್ ಬಳಿ ಸೇರಿದಂತೆ ಮುಖ್ಯ ರಸ್ತೆಗಳಲ್ಲಿ ಬಿಡಾಡಿ ದನಗಳು ರಸ್ತೆಗೆ ಅಡ್ಡಲಾಗಿ ಗುಂಪು ಗುಂಪಾಗಿ ಮಲಗುತ್ತಿರುವುದರಿಂದ ವಾಹನ ಸವಾರರಿಗೆ, ವಯೋವೃದ್ದರಿಗೆ, ಚಿಕ್ಕ ಮಕ್ಕಳಿಗೆ, ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಹಾಗೂ ಪ್ರಾಣಹಾನಿ ಸಂಭವಿಸುವ ಹಿನ್ನೆಲೆಯಲ್ಲಿ ಶೀಘ್ರವೇ ಬಿಡಾಡಿ ದನಗಳನ್ನು ಮಾಲೀಕರು ಕಟ್ಟಿಕೊಳ್ಳಲು ಸೂಚಿಸಲಾಗಿದೆ.

# ಹೆಸರು ತಪ್ಪಾಗದಂತೆ ನೋಂದಾಯಿಸಿ

### ಜನನ, ಮರಣ ನೋಂದಣಿಯಲ್ಲಿ ಅಕ್ಷರ ದೋಷವಾಗದಂತೆ ನಿಗಾ ವಹಿಸಿ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಖಡಕ್ ಸೂಚನೆ | ಜನರ ಅಲೆದಾಟ ತಪ್ಪಿಸಿ





**ಹಂಪಿ ಟೈಮ್ಸ್ ಹೊಸಪೇಟೆ**
ಜನನ-ಮರಣ ನೋಂದಣಿಯಲ್ಲಿ ಅಕ್ಷರ ದೋಷ ವಾಗದಂತೆ ನಿಗಾವಹಿಸುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದರು.


ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ಏರ್ಪಡಿಸಿದ್ದ ಜಿಲ್ಲಾ ಜನನ, ಮರಣಗಳ ನೋಂದಣೆ ಸಮನ್ವಯ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿದರು. ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ಜನನ, ಮರಣ ನೋಂದಣಿ ವೇಳೆ ಅಕ್ಷರ ದೋಷಗಳು ಹೆಚ್ಚಾಗುತ್ತಿ ರುವ ಬಗ್ಗೆ ದೂರು ಹೆಚ್ಚಾಗಿರುವುದರಿಂದ ಅಧಿಕಾರಿಗಳು ನಿಗಾ ವಹಿಸಬೇಕಿದೆ. ಜನನ, ಮರಣದ ನೋಂದಣಿಯಲ್ಲಿ ದಿನಾಂಕ, ಹೆಸರು, ತಂದೆ, ತಾಯಿ, ಗಂಡ, ಹೆಂಡತಿ ಹೆಸರುಗಳ ಅಕ್ಷರ ದೋಷಗಳು ಹೆಚ್ಚಾಗುತ್ತಿವೆ. ಗಂಡು, ಹೆಣ್ಣು ನಮೂದಾಗದೇ ಇರುವುದು ಅನೇಕ ಜನರಿಗೆ ಸಮಸ್ಯೆಗಳಾಗಿವೆ. ಮರಣ ಘಟನೆಗಳ ನೋಂದಣಿ ವೇಳೆ ಮೃತರ ಅಧಾರ್ ಸಂಖ್ಯೆಯ ಬದಲಾಗಿ ಅರ್ಜಿದಾರರ ಅಧಾರ್ ಸಂಖ್ಯೆಯನ್ನು ನಮೂದಿಸಿ ನೋಂದಣಿ ಮಾಡುತ್ತಿರುವುದು ಕಂಡುಬಂದಿವೆ. ಪೂರ್ಣ ಪ್ರಮಾಣದಲ್ಲಿ ಅರ್ಜಿದಾರರಿಂದ ಮಾಹಿತಿ ಮತ್ತು ವರದಿ ನಮೂನೆಗಳಾದ ಜನನ ವರದಿ-1, ಮರಣ ವರದಿ-2 ರಲ್ಲಿ ನೀಡಿದ ಮಾಹಿತಿಯನ್ನು ಜಾಗೂರಕತೆಯಿಂದ ನೋಂದಾಯಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.

**ತಪ್ಪು ಎಂಟ್ರಿ ಮಾಡಬೇಡ**

ಬೆಳೆ ವಿಮೆ ನಿಗಧಿಗೆ ಸ್ಥಳೀಯವಾಗಿ ನಡೆಸಿದ ಬೆಳೆ ಕಟಾವು ಪ್ರಯೋಗದ ವರದಿ ಮಾಡುವಾಗ ಅಧಿಕಾರಿಗಳು ಸಮಯಕ್ಕೆ ಬೆಳೆ ಕಟಾವು ಪ್ರಯೋಗ ಮಾಡಬೇಕು. ತಂತ್ರಾಂಶದಲ್ಲಿ ಅಂಕಿ ಅಂಶಗಳು ತಪ್ಪಾಗದಂತೆ ಪ್ರಯೋಗದ ವಿವರಗಳನ್ನು ಭರ್ತಿ ಮಾಡಬೇಕು. ಬೆಳೆ ಕಟಾವು ಪ್ರಯೋಗ ಪಾರದರ್ಶಕವಾಗಿ ನಡೆಯಲು ಮೂಲ ಕಾರ್ಯಕರ್ತರು, ವಿಮಾ ಕಂಪನಿಯ ಅಧಿಕಾರಿಗಳ ಸಹಯೋಗದಲ್ಲಿ ಬೆಳೆ ಕಟಾವು ಪ್ರಯೋಗದ ಸಂಧರ್ಭದಲ್ಲಿ ಕಡ್ಡಾಯವಾಗಿ ನಿಯಾಮಾನುಸಾರ ಪ್ರಯೋಗ ಕೈಗೊಳ್ಳಬೇಕು ಎಂದರು.

ಬೆಳೆ ಅಂದಾಜು ಸಮೀಕ್ಷೆ ಮತ್ತು ಬೆಳೆ ಕ್ಷೇತ್ರ ಮರುಹೊಂದಾಣಿಕೆ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಜಿ.ಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಹರಪನಹಳ್ಳಿ ಸಹಾಯಕ ಆಯುಕ್ತ ಚಿದಾನಂದ ಗುರುಸ್ವಾಮಿ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಎನ್.ಕೆ.ಪತ್ರಿಬಸಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

**ಆನಂದ ಬಾಣ**




## ದೆಹಲಿ ಗಣರಾಜ್ಯೋತ್ಸವದಲ್ಲಿ ಸಾಗಲಿದೆ ಲಕ್ಕುಂಡಿ ಶಿಲ್ಪಕಲೆ ಸ್ತಬ್ಧಚಿತ್ರ




ವಿವರ ಪುಟ 4

# ಸತ್ಯಾತ್ಮತೀರ್ಥ ಪಾದಂಗಳವರಿಂದ ದೇವಸ್ಥಾನ ನೂತನ ಜೋಡುರಥಗಳ ವೀಕ್ಷಣೆ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಉತ್ತರಾಧಿಮಠದ ಮಠಾಧೀಶರಾದ ಸತ್ಯಾತ್ಮತೀರ್ಥ ಪಾದಂಗಳವರು, ಬುಧವಾರ ಅನಿರೀಕ್ಷಿತವಾಗಿ ಪಟ್ಟಣದ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀಆಂಜನೇಯಸ್ವಾಮಿ ದೇವಸ್ಥಾನಗಳಿಗೆ ಭೇಟಿನೀಡಿ ದೇವರದರ್ಶನ ಪಡೆದರು. ಇವರು ಪಟ್ಟಣದ ಮಾರ್ಗವಾಗಿ ಸಂಚರಿಸುವ ವೇಳೆ, ಪ್ರತಿ ಬಾರಿಯೂ,ಇವರ ಗುರುಗಳಾದ ನರಹರಿತೀರ್ಥರಿಂದ ಪ್ರತಿಷ್ಟಾಪನೆಗೊಂಡ ಉಭಯದೇವರುಗಳಿಗೆ ಮಂಗಳಾರತಿ ನೆರವೇರಿಸಿ, ದರ್ಶನ ಮಾಡುತ್ತಾರೆ.

ಇದೀಗ ಉಭಯದೇವರುಗಳ ದೇವಸ್ಥಾನಗಳಲ್ಲಿ ನಡೆದಿರುವ ಕಾಮಗಾರಿಗಳ ಕುರಿತು, ದೇವಸ್ಥಾನದ ಸಮಿತಿಯ ಸದಸ್ಯರಿಂದ ಮಾಹಿತಿಪಡೆದು, ಕೆಲವು ಸಲಹೆಗಳನ್ನು ನೀಡಿದರು. ನಂತರ ಜೋಡುರಥಗಳ ನಿರ್ಮಾಣದ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ,ರಥಗಳ ವಾಸ್ತುಶಿಲ್ಪ, ಎತ್ತರವನ್ನು ಕಂಡು ಮೂಕವಿಸ್ಮಿತರಾಗಿ, ಪ್ರಶಂಸೆ ವ್ಯಕ್ತಪಡಿಸಿದರು. ವೇದವ್ಯಾಸ ಜೋಷಿ, ದೇವಸ್ಥಾನಸಮಿತಿಯ ಸದಸ್ಯರಾದ ಚಿದ್ರಿಸತೀಶ್, ಗೋವಿಂದರಪರಶುರಾಮ, ತಳವಾರ ದೊಡ್ಡರಾಮಣ್ಣ, ಸಜ್ಜೇದವಿಶ್ವನಾಥ, ಈ.ಯರಿಸ್ವಾಮಿ, ಎಲೆಗಾರ ಮಂಜುನಾಥ, ನರಸಿಂಹಮೂರ್ತಿ, ಸ್ಥಳಿಯ ಮುಖಂಡರಾದ ಎಂ.ವಿಶ್ವನಾಥಶೆಟ್ಟಿ, ಜಿ.ಸತ್ಯನಾರಾಯಣ ಶೆಟ್ಟಿ, ಕಲ್ಲಾಳಪರಶುರಾಮ, ಪ್ರಸಾದ್ ಜೋಷಿ, ಬಿ.ರುದ್ರಮುನಿ ಸೇರಿದಂತೆ ಇತರರಿದ್ದರು.




# ವಿಘಟಕ ಶಕ್ತಿಗಳು ಸಮಾಜ ಅಭಿವೃದ್ಧಿಗೆ ಮಾರಕ

### ಜಗದ್ಗುರು ಶ್ರೀ ಬಸವಲಿಂಗ ಮಹಾಸ್ವಾಮಿಗಳು ಹೇಳಿಕೆ | ರಾಜ್ಯದ ಅಭಿವೃದ್ಧಿಗೆ ವೀರಶೈವ ಲಿಂಗಾಯತರ ಕೊಡುಗೆ ಅಪಾರ



**ಹಂಪಿ ಟೈಮ್ಸ್ ಕಂಪ್ಲಿ**
ರಾಜ್ಯದ ಸರ್ವಾಂಗೀಣ ಬೆಳವಣಿಗೆಯಲ್ಲಿ ವೀರಶೈವ ಲಿಂಗಾಯತ ಸಮುದಾಯದ ಪಾತ್ರ ಮಹತ್ವದ್ದಿದೆ ಎಂದು ಹೊಸಪೇಟೆ ಕೊಟ್ಟೂರುಸ್ವಾಮಿ ಮಠದ ಜಗದ್ಗುರು ಶ್ರೀ ಬಸವಲಿಂಗಮಹಾಸ್ವಾಮಿಗಳು ಹೇಳಿದರು.

ಇಲ್ಲಿನ ಸಾಂಗತ್ರಯ ಸಂಸ್ಕೃತ ಪಾಠಶಾಲೆ ಆವರಣದಲ್ಲಿ ಚಾನಾಳ್ ಶೇಖರ್ ಹುಟ್ಟುಹಬ್ಬ ನಿಮಿತ್ತ, ಕ್ಷೇತ್ರದ ವೀರಶೈವ ಲಿಂಗಾಯತ ಸಮಾಜ ಬುಧವಾರ ಹಮ್ಮಿಕೊಂಡಿದ್ದ ಜಾಗೃತಿ ಸಮಾರಂಭ, ನಾನಾ ಸಂಸ್ಥೆಗಳಲ್ಲಿ ಆಯ್ಕೆಗೊಂಡವರಿಗೆ ಗೌರವ ಸನ್ಮಾನ ಸಮಾರಂಭದ ಸಾನ್ನಿಧ್ಯವಹಿಸಿ ಮಾತನಾಡಿದರು. ಬೆಂಗಳೂರು ಸೇರಿ ರಾಜ್ಯದ ಶಿಕ್ಷಣ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಬೆಳವಣಿಗೆಗೆ ವೀರಶೈವ ಲಿಂಗಾಯತ ಸಮಾಜದ ಕೊಡುಗೆ ಪ್ರಮುಖವಾಗಿದೆ. ವೀರಶೈವ ಸಮಾಜ ವಿಘಟಕ ಶಕ್ತಿಗಳಿಂದ ನಲುಗುತ್ತಿದೆ. ವಿಘಟಕ ಶಕ್ತಿಗಳಿಂದ ವಿಮುಖರಾದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಯುವಜನತೆಯನ್ನು ಸದಾಚಾರದತ್ತ ಕೊಂಡೊಯ್ಯಬೇಕಿದೆ ಎಂದು ಹೇಳಿದರು. ಬಿಡಿಸಿಸಿ ಬ್ಯಾಂಕ್, ಸೊಸೈಟಿ, ಕೃಷಿಕ ಸಮಾಜ, ಅಖಿಲ ಭಾರತ ವೀರಶೈವ ಮಹಾಸಭಾ ಸೇರಿ ಇತರೆ ಚುನಾವಣೆಗಳಲ್ಲಿ ಆಯ್ಕೆಗೊಂಡವರನ್ನ ಗೌರವಿಸಲಾಯಿತು.

ಶ್ರೀಧರಗಡ್ಡೆಯ ಶ್ರೀಮರಿಕೊಟ್ಟೂರು ದೇವರು, ಪ್ರಮುಖರಾದ ಚಾನಾಳ ಶೇಖರ್, ಬಿ.ವಿ.ಗೌಡ್ರು, ವಿಜಯಲಕ್ಷ್ಮಿಮರಿಶೆಟ್ರು, ಬಳೇ ಮಲ್ಲಿಕಾರ್ಜುನ, ಕೆ.ರೇಣುಕಗೌಡ, ಜಿ.ಅಮರಗೌಡ, ಎಸ್. ಚಂದ್ರಶೇಖರಗೌಡ, ಹೊಸಕೋಟೆ ಜಗದೀಶ, ಚಟ್ನಳ್ಳಿ ಶರಣ ಅರವಿ ಬಸವನಗೌಡ, ಕೆ.ಎಂ.ಹೇಮಯ್ಯಸ್ವಾಮಿ, ಪಿ.ಮೂಕಯ್ಯಸ್ವಾಮಿ, ಎಸ್.ಎಸ್.ಎಂ.ಚನ್ನಯ್ಯಸ್ವಾಮಿ, ಎಚ್.ಶಿವಶಂಕರಗೌಡ, ದಡದ ಡಿ.ವೀರಪ್ಪ, ಮಾವಿನಹಳ್ಳಿ ಬಸವರಾಜ, ಇಟಗಿ ಬಸವರಾಜಗೌಡ, ಮುಕ್ಕುಂದಿ ಶಿವಗಂಗಮ್ಮ, ಕೆ.ಎಸ್.ಮಲ್ಲನಗೌಡ ಇತರರಿದ್ದರು.

# ಶ್ರೀರಾಮ ಮಂದಿರದ ಪ್ರಥಮ ವರ್ಷದ ವರ್ಧಂತಿ ಮಹೋತ್ಸವ ಆಚರಣೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಆಯೋಧ್ಯ ಶ್ರೀರಾಮ ಮಂದಿರದ ಪ್ರಥಮ ವರ್ಷದ ವರ್ಧಂತಿ ಮಹೋತ್ಸವವನ್ನು ಪಟ್ಟಣದ ಶ್ರೀರಾಮ ಬಳಗದಿಂದ ಯುವಕರು ಸಂಭ್ರಮದಿಂದ ನೆರವೇರಿಸಿದರು.

ಪಟ್ಟಣದ ರೇಣುಕಾಚಾರ್ಯರ ದೇವಸ್ಥಾನದಲ್ಲಿ ಶ್ರೀರಾಮ ಮಂದಿರದ ಪ್ರಥಮ ವರ್ಷದ ವರ್ಧಂತಿ ಮಹೋತ್ಸವ ಪ್ರಯುಕ್ತ ಮಂಗಳವಾರ ತಳಿರು ತೋರಣಗಳಿಂದ,ರಂಗೋಲೆತಿಂದ ಹಾಗೂ ವಿದ್ಯುತ್ ದೀಪಗಳಿಂದ ದೇವಸ್ಥಾನವನ್ನು ಅಲಂಕರಿಸಿದ್ದರು.

ದೇವಸ್ಥಾನದಲ್ಲಿ ಶ್ರೀರಾಮನ ಭಾವಚಿತ್ರವನ್ನಿರಿಸಿ ಧಾರ್ಮಿಕ ಪೂಜಾ ಕೈಂಕಾರ್ಯಗಳು ವಿಜೃಂಭಣೆಯಿಂದ ನೆರವೇರಿದವು, ಭಕ್ತರೆಲ್ಲರೂ ಶ್ರೀರಾಮ ನಾಮಗಳನ್ನು ಪ್ರಾರ್ಥಿಸಿ ಶ್ರೀರಾಮನ ಕೃಪೆಗೆ ಪಾತ್ರರಾದರು.

ಪೂಜಾ ಕಾರ್ಯಕ್ರಮದ ನಂತರ ಭಕ್ತರಿಗೆ ಶ್ರೀರಾಮನ ಹೆಸರಲ್ಲಿ ಅನ್ನದಾಸೋಹ ವ್ಯವಸ್ಥೆ ಕಲ್ಪಿಸಿದ್ದರು. ಬಂದಂತಹ ಭಕ್ತಾಧಿಗಳು ಶ್ರೀರಾಮನಿಗೆ ನಮಸ್ಕರಿಸಿ,ಭಕ್ತಿ ಸಮರ್ಪಿಸಿದರು.

# ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭಿಸಲು ಸರ್ಕಾರ ಅನುಮೋದನೆ



**ಸಚಿವ ಸಂಪುಟದಲ್ಲಿ ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಸರ್ಕಾರ ಅನುಮೋದನೆ ನೀಡಿರುವುದು ಹಾಗೂ ಸರ್ಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಾರ್ಖಾನೆ ಕಳೆದ 24 ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ ವಿದ್ಯುತ್ ಬಿಲ್ ರೂ. 52 ಕೋಟಿ ಮನ್ನಾ ಮಾಡಿರುವ ಹಿನ್ನೆಲೆಯಲ್ಲಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ನೇತೃತ್ವದಲ್ಲಿ ಮಂಡ್ಯ ಜಿಲ್ಲೆಯ ಶಾಸಕರು ಇಂದು ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕರಾದ ನರೇಂದ್ರಸ್ವಾಮಿ, ರಮೇಶ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಉದಯಗೌಡ, ರವಿಶಂಕರ್, ಹರೀಶ್ ಗೌಡ, ದಿನೇಶ ಗೂಳಿಗೌಡ, ಮಧು ಮಾದೇಗೌಡ, ಮೈಷುಗರ್ ಅಧ್ಯಕ್ಷ ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮೊದಲು ಚೆನ್ನಾಗಿದ್ದೆ.....

ಆಧುನಿಕ ವೇಗದ ಮತ್ತು ಸ್ಪರ್ಧಾತ್ಮಕ ಪ್ರಂಚದಲ್ಲಿ ಕೆಲಸದೊತ್ತಡ, ಸಮಯದ ಅಭಾವದಲ್ಲಿ ಬಹುತೇಕರು ತಾವು ತಮ್ಮನ್ನೇ ಮರೆತು ಯಾಂತ್ರಿಕ ಜೀವನ ಸಾಗಿಸುತ್ತ, ಅಪಾರ ಸಂಪತ್ತಿದ್ದರೂ ಬದುಕು ಬೇಸರವೆನಿಸಿ ಶಾಂತಿ, ನೆಮ್ಮದಿ ಸಂತೋಷ ಹುಡುಕಾಟದ ಮಾರ್ಗದಲ್ಲಿರುವುದು ಗೋಚರಿಸುತ್ತಿದೆ.

ಸಂತೋಷವನ್ನು ಹುಡುಕುವುದು ಯಾರು ಮತ್ತು ಯಾಕೆ? ಯಾರು ತಾವು ಅಸಂತುಷ್ಟರೆಂದು ಭಾವಿಸಿರುವರೋ ಅವರು ಸಂತೋಷ ಹುಡುಕುವ ಮಾರ್ಗದಲ್ಲಿ ಇರುತ್ತಾರೆ.

ಈ ಭಾವನೆ ಹುಟ್ಟುವುದು ಯಾಕೆಂದರೆ, "ನನ್ನ ಲೌಕಿಕ ಪ್ರಪಂಚಕ್ಕೆ ಬೇಕಾಗುವಷ್ಟು ದೇವರು ಕರುಣಿಸಿದ್ದಾನೆ. ಆರೋಗ್ಯವಂತ, ಗೌರವ ಯುತವಾಗಿ, ನೆಮ್ಮದಿಯಿಂದ ಬದುಕುತ್ತಿದ್ದೇನೆ" ಎಂದು ದೈವತ್ವದ ಭಾವನೆಯಿಂದ ಬದುಕುವ ದಾರಿಯನ್ನೆ ಬಿಟ್ಟು, ಇನ್ನೊಬ್ಬ ರನ್ನು ನೋಡಿ, ಹೋಲಿಕೆ ಮಾಡಿಕೊಂಡು ಸ್ವಯಂ ಅತಿಯಾಸೆಗೋ ಅಥವಾ ಇನ್ನೊಬ್ಬರ ಉಪದೇಶಕ್ಕೋ ಪ್ರೇರೇಪಿತನಾಗಿ ಬಲಿಯಾಗು ತ್ತಾನೆ. ಅಂದರೆ ಅಲ್ಲಿಗೆ ಇದ್ದ ಸಂತೋಷ ಮಾಯವಾಗಿ ಅಸಂತುಷ್ಟ ಜನ್ಮ ತಾಳುತ್ತದೆ. ಇಂಥವರು ಅಸಂತುಷ್ಟರಾಗಿ ಯಾಕಿರುತ್ತಾರೆ? ಯಾಕೆಂದರೆ ಅವರಿಗೆ ಯಾವುದೇ ವಿಷಯ, ವಸ್ತುಗಳ ಅತೀಯಾಸೆ ಇರುತ್ತದೆ.

**ಮಿತಿಯನರಿತಾಶೆ, ಸಮುಚಿತವ ಮರೆಯದ ಯತ್ನ ।**
**ತೃತಿಕ್ಷೆ ಕಷ್ಟಾಂಶದಪರಿಹಾರ್ಯತೆಗೆ ॥**
**ಮೃತಿಯೆ ಜೀವನಕಥೆಯ ಕೊನೆಯಲ್ಲವೆಂಬರಿವು ।**
**ಹಿತಗಳಿವು ನರಕುಲಕೆ – ಮಂಕುತಮ್ಮ॥**

ಎಷ್ಟು ಅವಶ್ಯಕವೋ ಅಷ್ಟು ಹಿತಮಿತವಾದ ಆಸೆ ಹೊಂದುವದು, ಯೋಗ್ಯ ಮತ್ತು ಸರಿಯಾದುದನ್ನು ಮರೆಯದಿರಲು ಪ್ರಯತ್ನಿಸುವುದು, ಕಷ್ಟಗಳ ಪರಿಹಾರ್ಯತೆಗೆ ತಾಳ್ಮೆಯನ್ನು,ಹೊಂದುವುದು, ಮತ್ತು ಮೃತ್ಯುವೇ ಎಲ್ಲದಕ್ಕೂ ಕೊನೆಯಲ್ಲ ಎಂಬುದನ್ನು ಅರಿತುಕೊಳ್ಳುವುದು ಇವು ನಾಲ್ಕು ಮಾನವನ ನೆಮ್ಮದಿಯ ಜೀವನಕ್ಕೆ ಮುಖ್ಯ ಸೂತ್ರಗಳು ಎಂದು ತಿಳಿಸಿದ ಡಿ.ವಿ.ಜಿ ಅವರ ನುಡಿಗಳು ಮಾರ್ಗದರ್ಶಿಯ ಮಾತುಗಳು.



ಲಕುಮಿಸುತ ಸಾರವಾಡ
ಮೊ: 9449598373

Scan For Digital Colourful
HAMPI TIMES E-paper

'ಅವಶ್ಯಕತೆಗಿಂತ ಹೆಚ್ಚು ಮತ್ತು ಎಲ್ಲರಿಗಿಂತ ಹೆಚ್ಚು ಸಂಪತ್ತು, ಗೌರವ, ಪ್ರತಿಷ್ಟೆಗಳ ಸಂಗ್ರಹ ನನಗಿರಲಿ' ಎಂಬ ಮನದಾಸೆ ಇರುತ್ತದೆ. ಅದರಿಂದ ತನ್ನ ಪ್ರತಿಷ್ಟೆ ಗೌರವ ವೃದ್ಧಿಸುತ್ತದೆ ಎಂಬ ಮಾಯಾ ಪಾಶದಲ್ಲಿ ಬೀಳುತ್ತಾನೆ. ಇಂತಹ ಸಂದರ್ಭದಲ್ಲಿ ಯಾರೇ ಎಷ್ಟೇ ಸಲಹೆ ಸೂಚನೆ ಕೊಟ್ಟರೂ ಅವನು ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ.

ಇದೇ ಸ್ಥಿತಿ ಮುಂದುವರೆದಾಗ ಅಲ್ಪ ಸ್ವಲ್ಪ ಸಂಪತ್ತನ್ನು ಗಳಿಸುತ್ತಾನೆ ಕೂಡಾ. ಆಗ ಅದು ತನ್ನ ಸಾಧನೆ ಎಂದು ಪರಿಭಾವಿಸುತ್ತಾನೆ. ಒಮ್ಮೊಮ್ಮೆ ಸಾಧಿಸದೇ ಹೋದಾಗ, ಸಿಟ್ಟು ಆವರಿಸಿ ಛಲದಿಂದ ದುರ್ಮಾರ್ಗ ಹಿಡಿಯಲು ಕಾರಣವಾಗುತ್ತದೆ. ಅನ್ಯಾಯ ದಿಂದ ಗಳಿಸಿದ್ದು ಅನಾಯಾಸ ವಾಗಿ ತಾನೇ ಹೊರಟು ಹೋಗುತ್ತದೆ ಎನ್ನುವ ವಿಚಾರಧಾರೆ ಅವನ ಹತ್ತಿರ ಸುಳಿಯುವದೇ ಇಲ್ಲ.

ಸಮಯ ಕಳೆದಂತೆ, ನಿಧಾನವಾಗಿ ಮನಸ್ಸಿನ ನೆಮ್ಮದಿ ಹಾಳಾಗಲು ಆರಂಬಿ ಸುತ್ತದೆ. "ಮೊದಲು ನಾನು ಚೆನ್ನಾಗಿದ್ದೆ" ಎಂಬ ನೆನಪು ಕಾಡಲು ಆರಂಭಿಸುತ್ತದೆ. ಅಷ್ಟೊತ್ತಿಗೆ ಕಾಲ ತುಂಬಾ ಮುಂದೆ ಮುಂದೆ ಹೋಗಿ ರುತ್ತದೆ. ಇದು ಪ್ರಯೋಜನವಿ ಲ್ಲವೆಂದು ಅನ್ನಿಸಿದರೂ ಪ್ರತಿಷ್ಟೆಗಾಗಿ ಅದೇ ಸ್ವಭಾವ ವನ್ನು ಮುಂದುವರೆಸಿಕೊಂಡು ನೆಮ್ಮದಿ ಕಳೆದುಕೊಂಡರೂ "ನಾನು ಸಂತೋಷದಿಂದ ಇದ್ದೇನೆ" ಎನ್ನುವ ಅಭಿನಯ ಆರಂಭವಾಗುತ್ತದೆ. ಈ ಚಟುವಟಿಕೆಗಳ ದುಷ್ಪರಿಣಾಮ ಮನೆಯವರ ಮೇಲೂ ಪ್ರಭಾವ ಬೀರುವ ಸಾಧ್ಯತೆ ಉಂಟು. ಯಾರ ಹತ್ತಿರವಾದರೂ ಹೇಳಿಕೊಳ್ಳಲು ಮುಜುಗರ ವಾಗುತ್ತದೆ.

ಹಾಗಾದರೇ... ಇಂತಹ ಪರಿಸ್ಥಿತಿ ಬದಲಾವಣೆಗೆ ಅವಕಾಶಗಳೇ ಇಲ್ಲವೆ? ಯಾಕಿಲ್ಲ. ಆಡು ಭಾಷೆಯಲ್ಲಿ ಒಂದು ನಾಣ್ನುಡಿ ಇದೆ "ತನಗೆ ತಿಳಿಯದಿದ್ದರೆ ಮೊಳಕಾಲಿಗೆ ಕೇಳು" ಎಂದು. ಅಂದರೆ ಶಬ್ದಶಃ ಅರ್ಥ ಮಾಡಿಕೊಂಡು ತನ್ನ ಮೊಳಕಾಲಿಗೆನೇ ಕೇಳುವದಲ್ಲ. ಬದಲಾಗಿ, ತನ್ನ ನಂಬಿಗಸ್ತರು, ಹಿರಿಯರು, ಮಿತ್ರರು ಅಥವಾ ದೈವೀ ಮನೋಭಾವನೆ ಹೊಂದಿ ರುವ ತಮ್ಮ ಗುರುಗಳ ಹತ್ತಿರ ಮನಬಿಚ್ಚಿ ಹೇಳಿಕೊಳ್ಳುವುದು ಎಂಬರ್ಥ.

ಯಾವುದೇ ಅನಿಷ್ಟ ಕರ್ಮಗಳು ಜರುಗುತ್ತವೆ ಎಂದರೆ ಅದಕ್ಕೆ ಮೂಲ ಕಾರಣ ಅಜ್ಞಾನ. ಈ ಅಜ್ಞಾನವನ್ನು ಹೋಗಲಾಡಿಸಬೇಕೆಂದರೆ ಜ್ಞಾನವನ್ನು ಪಡೆಯಬೇಕು. ಜ್ಞಾನವನ್ನು ಪಡೆಯುವುದು ಎಂದರೆ ತನ್ನನ್ನು ತಾನು ಅರಿತುಕೊಳ್ಳುವುದು. ಈ ಕೆಲಸ ಬಹುತೇಕರು ಯಾರೂ ಸ್ವಯಂ ಸಾಧನೆ ಮಾಡಲು ಆಗದು. ಅದಕ್ಕೆ ಒಬ್ಬ ಅನುಭವಿ ಮತ್ತು ತನ್ನ ಜ್ಞಾನವನ್ನು ಮನಃಪೂರ್ವಕವಾಗಿ ಧಾರೆ ಎರೆಯಲು ಸಿದ್ಧನಿದ್ದ ಮನುಷ್ಯ ಬೇಕು. ಅಂಥವನಿಗೆ 'ಗುರು' ಎನ್ನುತ್ತಾರೆ. ಅಂತಹ ಗುರುಗಳ ಹತ್ತಿರ ಹೋಗಿ ಅಳಲನ್ನು ತೋಡಿಕೊಂಡಾಗ ಗುರು ಕರುಣೆಯಿಂದ ಮನಸ್ಸಿಗೆ ನೆಮ್ಮದಿ ದೊರೆತು ಮುಂದಿನ ಜೀವನ ನೆಮ್ಮದಿಯಿಂದ ಸಾಗಿಸಲು ಸಾಧ್ಯ.

ಭಗವದ್ಗೀತೆಯಲ್ಲಿ ಕೂಡಾ ಶ್ರೀಕೃಷ್ಣನು ಅರ್ಜುನನಿಗೆ ಜ್ಞಾನಾರ್ಜನೆಗೆ ಗುರುಗಳ ಹತ್ತಿರ ಹೋಗುವುದೇ ಸೂಕ್ತ ಎಂದು ಉಪದೇಶಿಸಿದ್ದಾನೆ.(4/34)

**"ತದ್ವಿದ್ಧಿ ಪ್ರಣಿಪಾತೇನ**
**ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ**
**ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ ॥"**



ತತ್ವದರ್ಶಿ ಜ್ಞಾನಿಗಳ ಹತ್ತಿರ ಹೋಗುವುದು, ಅವರಿಗೆ ವಂದಿಸಿ ಸೇವೆಯಲ್ಲಿ ತೊಡಗುವುದು ಮತ್ತು ಯಾವ ಸಂಕೋಚ ಮುಜುಗರವಿಲ್ಲದೇ ಆತಂಕವನ್ನು ಮನಬಿಚ್ಚಿ ಹೇಳಿಕೊಳ್ಳುದನ್ನು ಮಾಡಿದರೆ, ಜ್ಞಾನಿಗಳಾದ ಗುರುಗಳು ಕರುಣಿಸಿ ತತ್ವಜ್ಞಾನೋಪಾಯದ ಮಾರ್ಗವನ್ನು ತೋರುತ್ತಾರೆ ಎಂದು ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ಉಪದೇಶಿಸಿದ್ದಾನೆ.

ಹಾಗಾಗಿ ವಿವೇಚನೆಯಿಂದ ಮನಸ್ಸನ್ನು ಬದಲಿಸಿಕೊಳ್ಳಬೇಕು. ಇನ್ನೊಬ್ಬರ ಹತ್ತಿರ ಹೇಳಿಕೊಳ್ಳಲು ಸಂಕೋಚ ಎನಿಸಿದರೆ ಸುಮ್ಮನೆ ತಮ್ಮ ಗುರುಗಳ ಸತ್ಸಂಗಕ್ಕೆ ಹೋಗಬೇಕು. ಮೊದಮೊದಲು ಹೋದಾಗ ಹಿಡಿಸದಿರಬಹುದು. ಅಭ್ಯಾಸ ಮುಂದುವರೆಸಿ ರೂಢಿಸಿಕೊಳ್ಳಬೇಕು. ನಂತರ ಸತ್ಸಂಗದ ಪರಿಣಾಮ ಸದ್ಭಕ್ತರ ಪರಿಚಯವಾಗುತ್ತದೆ. ಕಾಲಕ್ರಮೇಣ ಗುರುಗಳೇ ಗುರುತಿಸಿ ಆಶೀರ್ವದಿಸುತ್ತಾರೆ. ಇವೆಲ್ಲವೂ ತಕ್ಷಣವೇ ಆಗದಿದ್ದರೂ ಸಮಯಕ್ಕಾಗಿ ಕಾಯ್ದು ತಾಳ್ಮೆಯಿಂದ ನಿರೀಕ್ಷಿಸಬೇಕು.

ಇದೆಲ್ಲವನ್ನು ಸನ್ಯಾಸಿ ತರಹ ಪಾಲಿಸಬೇಕೆಂದೇನಿಲ್ಲ. ಸಂಸಾರದಲ್ಲಿದ್ದುಕೊಂಡೇ ಪಾರಮಾರ್ಥಿಕ ಚಿಂತನೆ ಕಡೆಗೆ ತಿರುಗಬೇಕು. ಸಾಧ್ಯವಾದಷ್ಟು ಧ್ಯಾನ ಭಜನೆ ಯೋಗ ಸತ್ಕಾರ್ಯದಲ್ಲಿ ಭಾಗವಹಿಸಲು ಆಸಕ್ತಿ ತೋರಿಸುವ ಪ್ರಯತ್ನ ಮಾಡಬೇಕು. ಪುರ್ವ ಜನ್ಮದ ಕರ್ಮಕ್ಕನುಸಾರವಾಗಿ ಕಹಿ ಘಟನೆಗಳು ಜರುತ್ತವೆ ಎಂದು ಪರಿಗಣಿಸಿದರೂ ಅವುಗಳನ್ನು ಜೀವನದಲ್ಲಿ ಪರಮಾರ್ಥಿಕವನ್ನು ಅನುಸರಿದುವುದರಿಂದ ದುರ್ಮಾರ್ಗ, ದುಷ್ಟ ಚಟ, ಸಂಕಷ್ಟಗಳನ್ನು ಎದುರಿದುವ ಶಕ್ತಿ ಪಡೆಯಬಹುದು. ನಾವು ಮಾಡಿದ ಪ್ರಮಾದಕ್ಕೆ ಇತತರನ್ನೋ, ಕರ್ಮವನ್ನೋ ಅಥವಾ ದೇವರನ್ನೋ ದೂಷಿಸುತ್ತ, ನಮ್ಮನ್ನು ನಾವೇ ಅಂತರಂಗದಲ್ಲಿ ಇಣಿಕಿ ಹಾಕಿ ಅರಿಯುವ ಪ್ರಯತ್ನ ಮಾಡಿದರೆ 'ಜ್ಞಾನದ ಕೊರತೆಯೇ ಇದಕ್ಕೆ ಕಾರಣ'ವೆಂಬ ಅರಿವು ಮೂಡುತ್ತದೆ.

# ವೀರ ಸೇನಾನಿ ಸುಭಾಷ್ ಚಂದ್ರ ಬೋಸ್

ನೀವು ನಮಗೆ ರಕ್ತ ಕೊಡಿ,ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ " ಎಂದು ಹೇಳಿದ ಸಿಡಿಲ ಮರಿ ಗಂಡೆದೆಯ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್ ರವರ ಜನ್ಮದಿನ ಇಂದು ಜನವರಿ 23. ಸುಭಾಷ್ ಚಂದ್ರ ಬೋಸ್ ಅಂದರೆ ಸಾಕು ನಮ್ಮ ನರನಾಡಿಗಳಲ್ಲಿ ರಕ್ತ ಸಂಚಾರದ ವೇಗ ತಂತಾನೆ ಹೆಚ್ಚಾಗುತ್ತೆ ಸ್ವಾತಂತ್ರ ಚಳುವಳಿಯ ರಂಗು ನಮ್ಮ ಮುಂದೆ ಬಂದಮೇಲೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಕಷ್ಟು ಹೋರಾಟಗಾರರು ಬಂದು ಹೋಗುತ್ತಾರೆ. ಅಂದರೆ ಅದರಲ್ಲಿ ಕೆಲವರು ಮಾತ್ರ ಮನಸ್ಸಿನಲ್ಲಿ ಉಳಿಯುತ್ತಾರೆ. ಕೆಲವರು ಹೃದಯದಲ್ಲಿ ನೆಲೆಸುತ್ತಾರೆ. ಇಂಥವರ ಸಾಲಿನಲ್ಲಿ ಬರುವವರು ನೇತಾಜಿ ಸುಭಾಷ್ ಚಂದ್ರ ಬೋಸ್ ರವರು. ಇವರು ಜನವರಿ 23 1897 ರಲ್ಲಿ ಓಡಿಸ್ಸಾದ ಕಟಕನಲ್ಲಿ ಜನಿಸುತ್ತಾರೆ. ತಂದೆ ಜಾನಕಿ ನಾಥರು. ತಾಯಿ ಪ್ರಭಾವತಿ ದತ್ತ. ಈ ದಂಪತಿಗಳ ಹದಿನಾಲ್ಕು ಜನ ಮಕ್ಕಳಲ್ಲಿ ಸುಭಾಷ್ ಚಂದ್ರರು 9ನೇಯವರು. ಜಾನಕಿ ನಾಥರು ಶ್ರೇಷ್ಠ ವಕೀಲಿ ವೃತ್ತಿಯಲ್ಲಿದ್ದವರು. ತಕ್ಕಮಟ್ಟಿಗೆ ಶ್ರೀಮಂತ ಮನೆತನದವರು.ಸುಭಾಸರು ಮುಂದೆ ಆಸ್ಟ್ರಿಯಾ ದೇಶದ ಎಮಿಲಿ ಸಿಂಕಿ ಎಂಬುವರನ್ನು ಮದುವೆಯಾಗುತ್ತಾರೆ.ಇವರಿಗೆ ಅನಿತಾ ಬೋಸ್ ಎಂಬ ಮಗಳಿದ್ದಾಳೆ.

1906ರಲ್ಲಿ ಸುಭಾಷರು ಪ್ರಾಥಮಿಕ ಶಿಕ್ಷಣವನ್ನು ಹಲವಾರು ಕಡೆ ಅಭ್ಯಾಸಿಸಿದರು. ಏಕೆಂದರೆ ತೀಕ್ಷ್ಣ ಬುದ್ಧಿ ಹೊಂದಿದ್ದ ಇವರು ವ್ಯಕ್ತಿ ಯಾರೇ ಆಗಿರಲಿ ಹೇಳುವ ವಿಚಾರವನ್ನು ಹೇಳುವುದು ನನ್ನ ಕರ್ತವ್ಯ ಎಂಬ ಸಿದ್ಧಾಂತ ಇವರದು. ಕಟಕ್ ನ ರೇವನ್ ಶಾ ಕಾಲೇಜ್ ಒಂದರ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಾರೆ. ಇವರ ಮೇಲೆ ಅಘಾದ ಪರಿಣಾಮ ಬೀರಿದ ಶಿಕ್ಷಕರೆಂದರೆ ಭೀಮ ಮಾಧವರು. ಇವರಲ್ಲಿ ಹೋರಾಟದ ಕಿಚ್ಚನ್ನು ಬಾಲ್ಯದಲ್ಲಿ ಹಚ್ಚಿದ ಶಿಕ್ಷಕರಿವರು.ಪ್ರತಿಯೊಬ್ಬ ಶಿಕ್ಷಕರಲ್ಲಿ ಅಂತಹ ಅಗಾಧವಾದ ಶಕ್ತಿ ಇರುತ್ತದೆ. ಅಂತಹ ಶಿಕ್ಷಕರನ್ನು ಪಡೆದಿದ್ದರಿಂದಲೇ ಸುಭಾಸರು ಹೋರಾಟಗಾರರಾಗಲು ಸಾಧ್ಯವಾಯಿತು.

ಮುಂದೆ ಪ್ರೌಢ ಶಿಕ್ಷಣವನ್ನು ಪಡೆಯುತ್ತಿದ್ದಾಗ ಅವರ ಮೇಲೆ ಅಘಾದ ಪರಿಣಾಮ ಬೀರಿದ ಪುಸ್ತಕವೆಂದರೆ ಅದು ಸ್ವಾಮಿ ವಿವೇಕಾನಂದರು ಬರೆದ ಕೋಲಂಬೋ ಟು ಅಲ್ಮೋಕ್ ಎಂಬ ಪುಸ್ತಕವನ್ನು ಅತ್ಯಂತ ಪ್ರೀತಿಯಿಂದ ಗೌರವದಿಂದ ತಮ್ಮಲ್ಲಿ ಇಟ್ಟುಕೊಂಡಿದ್ದರು. ಅದರಲ್ಲಿ ಬರೆದ ಪ್ರತಿಯೊಂದು ಮಾತುಗಳನ್ನು ಸುಭಾಷರು ತಮ್ಮ ಎದೆಯೊಳಗೆ ಇಟ್ಟುಕೊಂಡಿದ್ದರು. ಅದೇ ರೀತಿಯಾಗಿ ದಯಾನಂದ್ ಸರಸ್ವತಿಯವರು ಸ್ಥಾಪನೆ ಮಾಡಿದ್ದ ಆರ್ಯ ಸಮಾಜ ದಿಂದ ಪ್ರಕಟಗೊಳ್ಳುತ್ತಿದ್ದ ಆರ್ಯ ಪತ್ರಿಕೆಯು ಕೂಡ ಸುಭಾಸರ



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Scan For Digital Colourful
HAMPI TIMES E-paper



ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಮುಂದೆ ಕಾಲೇಜ ಶಿಕ್ಷಣ ಪಡೆಯುತ್ತಿದ್ದಾಗ ಬ್ರಿಟಿಷ್ ಆಡಳಿತದಿಂದ ಕೂಡಿದ ಕಾಲೇಜಿನಲ್ಲಿ ಭಾರತೀಯರಿಗೂ ಬ್ರಿಟಿಷರಿಗೂ ತಾರತಮ್ಯವಾಗಿದ್ದ ಶಿಕ್ಷಣದ ವಿರುದ್ಧ ಇವರು ಬಂಡೆದ್ದರು.

**ಆಧ್ಯಾತ್ಮಿಕ ಒಲವು:** ಸ್ವಾಮಿ ವಿವೇಕಾನಂದರ ಪ್ರಭಾವದಿಂದ ಆಧ್ಯಾತ್ಮಿಕದತ್ತ ಇವರ ಚಿತ್ತ ಹರಿಯುತ್ತದೆ. ಆದರೆ ಅವರ ತಂದೆಗೆ ಅದು ಇಷ್ಟವಿರಲಿಲ್ಲ. ಮಗ ಒಬ್ಬ ಒಳ್ಳೆಯ ಹುದ್ದೆ ಅಲಂಕರಿಸಬೇಕೆಂಬುದು ಅವರ ಆಶಯವಾಗಿತ್ತು.ಅದಕ್ಕೆ ಬೋಸರು ತಂದೆಗೆ ಹೇಳುತ್ತಾರೆ ನಿಮ್ಮ ಆಸೆಯಂತೆ ನಾನು ಇಂಡಿಯನ್ ಸಿವಿಲ್ ಸರ್ವಿಸ್ ಐಸಿಎಸ್ ಪರೀಕ್ಷೆ ಬರೆದು ಖಂಡಿತ ಪಾಸ್ ಆಗುತ್ತೇನೆ. ಆದರೆ ಬ್ರಿಟಿಷರ ಕೈ ಕೆಳಗೆ ಮಾತ್ರ ನಾನು ಕೆಲಸ ಮಾಡುವುದಿಲ್ಲವೆಂದು ಹೇಳಿ ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತತ್ವಶಾಸ್ತ್ರ ವಿಭಾಗದಲ್ಲಿ ಬಿಎ ಪದವಿ ಎಂಎ ಪದವಿ ಮುಗಿಸಿ 1919 ರಲ್ಲಿ ಲಂಡನ್ನಿಗೆ ಪ್ರಯಾಣ ಬೆಳೆಸುತ್ತಾರೆ. ಭಾರತದ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದಾಗ ಇವರು ಲಂಡನೆಯಲ್ಲಿ ಇರುತ್ತಾರೆ. ಮುಂದೆ 1920 ರಲ್ಲಿ ಐಸಿಎಸ್ ಪರೀಕ್ಷೆಯನ್ನು ಕೇವಲ ನಾಲ್ಕು ತಿಂಗಳಲ್ಲಿ ಓದಿ ನಾಲ್ಕನೇ ರಾಂಕ್ ಪಡೆದು ಎಲ್ಲರಿಗೂ ಅಚ್ಚರಿ ಮೂಡಿಸುತ್ತಾರೆ. ಭಾರತೀಯರು ಕೂಡ ಅಂತಹ ಉನ್ನತ ಪರೀಕ್ಷೆಯನ್ನು ಉತ್ತಮ ರೀತಿ ಬರೆಯಬಲ್ಲರು ಎಂಬುದನ್ನು ಸಾಧಿಸಿ ತೋರಿಸಿ ಕೊಟ್ಟಂತವರು. ಆಧ್ಯಾತ್ಮಿಕ ಒಲವಿನಿಂದಾಗಿ ತತ್ವಶಾಸ್ತ್ರದ ಪ್ರಭಾವದಿಂದಾಗಿ ಮತ್ತೆ ಅವರು ದರ್ಶನ ಶಾಸ್ತ್ರದಲ್ಲಿ ವಿಶೇಷ ಆಸಕ್ತಿ ವಹಿಸಿ ಅಧ್ಯಯನ ಮಾಡಿ ನಂತರದಲ್ಲಿ ಐಸಿಎಸ್ ಹುದ್ದೆಗೆ ರಾಜೀನಾಮೆ ಕೊಟ್ಟು ಕಲ್ಕತ್ತಾ ನ್ಯಾಷನಲ್ ಕಾಲೇಜ್ ಪ್ರಿನ್ಸಿಪಾಲ್ ರಾಗಿ ಸೇವೆ ಸಲ್ಲಿಸುತ್ತಾರೆ. ನಂತರದಲ್ಲಿ ಕಲ್ಕತ್ತಾ ಮೇಯರ್ ಆಗಿಯೂ ಸೇವೆ ಸಲ್ಲಿಸುತ್ತಾರೆ. ಇವರು ಯಾವಾಗಲೂ ಹೇಳುತ್ತಿರುತ್ತಾರೆ ವ್ಯಕ್ತಿಗಳ ವಿಚಾರಗಳು ದೊಡ್ಡವೆ ಹೊರತು ವ್ಯಕ್ತಿಗಳಲ್ಲ. ಎಂಬುದಾಗಿ ಹೇಳುತ್ತಿರುತ್ತಾರೆ.

**ಹೋರಾಟದ ಬದುಕು:–** ವೀರ ಸಾವರ್ಕರ್ ಭೇಟಿ.

ವೀರ ಸಾವರ್ಕರನ್ನು ಭೇಟಿಯಾಗಿ ಅಘಾದ ಬದಲಾವಣೆಗೆ ಪ್ರಯತ್ನಿಸುತ್ತಾರೆ. ಆದರೆ ಸಾವರ್ಕರರು ಸುಭಾಸರಿಗೆ ನಿನ್ನಂಥವರು ಬಹುದಿನಗಳ ಕಾಲ ಬಂದಿಯಾಗಿದ್ದು ಹೋರಾಟ ನಡೆಸುವುದು ಸರಿಯಲ್ಲ ಎಂದಾಗ ಮುಂದೆ ಬೋಸರು ಸೇನೆ ರಚನೆಗೆ ಹೋರಾಟ ಮಾಡುತ್ತಾರೆ ದೇಶವನ್ನೇ ತೊರೆದು ಹೋಗಿ ಸೇನಾ

ರಚನೆ ಮಾಡುತ್ತಾರೆ.ಪೇಷಾವರ್, ಕಾಬುಲ್, ಮಾಸ್ಕೋ ಮೂಲಕ ಬರ್ಲಿನ್ ತಲುಪುತ್ತಾರೆ.ಸ್ವಾತಂತ್ರ್ಯ ಹೋರಾಟಕ್ಕೆ 3500 ಜನ ಭಾರತೀಯ ಯುದ್ಧ ಕೈದಿಗಳನ್ನು ಒಟ್ಟುಗೂಡಿಸಿ ಸೈನ್ಯ ರಚನೆಗೆ ಮುಂದಾದರು. ಅಲ್ಲಿಂದ ಮುಂದೆ ಜಪಾನ್ ಕೂಡ ಇವರಿಗೆ ಸಹಾಯ ಮಾಡುತ್ತೆ, 1941 ನವಂಬರ್ ಎರಡರಲ್ಲಿ ಬರ್ಲಿನಲ್ಲಿ ಫ್ರೀ ಇಂಡಿಯಾ ಸೆಂಟರ್ ಸ್ಥಾಪನೆ ಮಾಡುತ್ತಾರೆ.ಜರ್ಮನ್ ಸೇನಾ ಕೇಂದ್ರಗಳಿಗೆ ಭೇಟಿಯ ನಂತರ ಇಂಡಿಯನ್ ಲೀಗ್ ರಚನೆ ಮಾಡುತ್ತಾರೆ ನಂತರದಲ್ಲಿ ಜಪಾನ್ ತಲುಪಿ ಅಲ್ಲಿ ಹೋರಾಟಗಾರ ತೋಜೋ ಅವರನ್ನು ಭೇಟಿ ಮಾಡುತ್ತಾರೆ. ಜರ್ಮನ್ ಯುದ್ಧ ತರಬೇತಿಯನ್ನು ನೀಡಿದರೆ ಹೀಗೆ ಸುಭಾಸರು ಭಾರತೀಯ ರಾಷ್ಟ್ರೀಯ ಸೇನೆಯನ್ನು 1942 ಸಪ್ಟೆಂಬರ್ 2 ರಲ್ಲಿ ಸ್ಥಾಪನೆ ಮಾಡಿ ನೀವು ನನಗೆ ನಿಮ್ಮ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ತಂದುಕೊಡುತ್ತೇನೆ. ಸ್ವಾತಂತ್ರವೆಂಬುದು ಯಾರು ಕೊಡುವಂತ ಸರಕಲ್ಲ ನಾವು ಅದನ್ನು ಪಡೆದುಕೊಳ್ಳಬೇಕಾದದ್ದು, ಮುಂದೆ ಅಜಾದ್ ಹಿಂದ್ ಜನ ಸಮ್ಮೇಳನಗಳನ್ನು ಟೋಕಿಯೋ ಮತ್ತು ಬ್ಯಾಂಕಾಂಗಗಳಲ್ಲಿ ನಡೆಸುತ್ತಾರೆ. ಜೈ ಹಿಂದ್ ಎಂಬ ಘೋಷಣೆ ಅವತ್ತಿನಿಂದ ಇವತ್ತಿಗೂ ಉಳಿದಿದೆ ಎಂದರೆ ಅದು ಐಎನ್ಎ ದ ಪ್ರಭಾವ. ಬಂಗಾಳದ ಹುಲಿಯನ್ನು ಲಾಂಛನವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಗಾಂಧೀಜಿ ಮತ್ತು ಬೋಸ್ ಅವರ ವಿಚಾರಗಳು ವಿಭಿನ್ನವಾಗಿದ್ದರು ಒಬ್ಬರನ್ನೊಬ್ಬರು ಕುರಿತು ನೀಡಿದ ಹೇಳಿಕೆಗಳೆಂದರೆ 1942 ರಲ್ಲಿ ಗಾಂಧೀಜಿಯವರು ಬೋಸ್ ರವರನ್ನು ದೇಶಭಕ್ತ ರಾಜಕುಮಾರ ಎಂದು ಹೊಗಳುತ್ತಾರೆ. ಸಿಂಗಾಪುರ್ ರೇಡಿಯೋ ಘೋಷಣೆಯಲ್ಲಿ ಸುಭಾಸರು ಚಲೋದಿಲ್ಲಿ ಜೈ ಹಿಂದ್ ಎಂದಿದ್ದರು.

ನೇತಾಜಿ ಮರಣ 1945 ಆಗಸ್ಟ್ 18 ರಂದು ಬ್ಯಾಂಕಾಂಗ್ ಹೋಗುವಾಗ ಫಾರ್ವರ್ಡ್ ವಿಮಾನ ಅಪಘಾತವಾಗಿ ಮರಣ ಹೊಂದಿದ್ದಾರೆ ಎಂಬ ವದಂತಿದೆ. ಅದು ಸುಳ್ಳು ಎಂದು ಅವರ ತನಿಖೆಗೆ ಮೂರು ಆಯೋಗಗಳು ಬಂದು ತನಿಖೆ ನಡೆಸಿ ವರದಿ ನೀಡಿವೆ ಒಂದು 1956 ರಲ್ಲಿ ಶ ನವಾಜ್ ಕಮಿಷನ್ ವರದಿ. ಎರಡನೇದು 1970ರಲ್ಲಿ ಖೋಸ್ಲಾ ಕಮಿಷನ್ ವರದಿ. ಮೂರು 1999 ರಲ್ಲಿ ಮುಖರ್ಜಿ ಕಮಿಷನ್ ವರದಿ.ಯಾವ ವರದಿಗಳಿಂದಲೂ ಸ್ಪಷ್ಟ ವಿಚಾರಗಳಿಲ್ಲ. 1992 ರಲ್ಲಿ ಭಾರತ ಸರ್ಕಾರವು ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ಕೊಟ್ಟು ಗೌರವಿಸಿದೆ.

ನೇತಾಜಿಯವರ ವಿಚಾರ ಶಕ್ತಿ ಆಧ್ಯಾತ್ಮಿಕ ನಿಲುವು ದೃಢ ನಿರ್ಧಾರ ಸಾಹಸ ಪ್ರವೃತ್ತಿ ಅಪಾರವಾದ ದೇಶಾಭಿಮಾನ ಇಂದಿನ ಯುವ ಜನಾಂಗಕ್ಕೆ ದಾರಿದೀಪವಾಗಲಿ, ನೇತಾಜಿ ಅಂತ ಮಹಾನ್ ವ್ಯಕ್ತಿ ಮತ್ತೊಮ್ಮೆ ಈ ಪುಣ್ಯಭೂಮಿಯಲ್ಲಿ ಹುಟ್ಟಿ ಬರಲಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ದೆಹಲಿ ಗಣರಾಜ್ಯೋತ್ಸವದಲ್ಲಿ ಲಕ್ಕುಂಡಿ ಶಿಲ್ಪಕಲೆ ತೊಟ್ಟಿಲು

## ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ಹೇಳಿಕೆ। ಜ.26 ರಂದು ಕರ್ನಾಟಕದ ಹಿರಿಮೆ ಪ್ರತಿಪಾದಿಸಲಿದೆ.

■ **ಹಂಪಿ ಟೈಮ್ಸ್ ನವದೆಹಲಿ**

ಸರ್ವಜನಾಂಗದ ಶಾಂತಿಯ ತೋಟದಂತೆ ಕಂಗೊಳಿಸುತ್ತಿರುವ 'ಲಕ್ಕುಂಡಿ: ಶಿಲ್ಪಕಲೆಯ ತೊಟ್ಟಿಲು' ಸ್ತಬ್ಧ ಚಿತ್ರವು ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ಸಂಪೂರ್ಣವಾಗಿ ಸಿದ್ಧಗೊಂಡಿದೆ. ರಾಜಧಾನಿಯ ಕರ್ತವ್ಯಪಥದಲ್ಲಿ (ರಾಜ್‌ಪಥ್) ಇದೇ ಜ.26 ರಂದು ಸಾಗುವುದರೊಂದಿಗೆ ಕರ್ನಾಟಕ ರಾಜ್ಯದ ಹಿರಿಮೆ, ಸರ್ವಧರ್ಮ, ಸಮನ್ವಯ, ಶಾಂತಿ, ಸಹಬಾಳ್ವೆಯನ್ನು ಪ್ರತಿಪಾದಿಸಲಿದೆ.

ಕರ್ನಾಟಕ ರಾಜ್ಯದ ಪರವಾಗಿ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಪಾಲ್ಗೊಳ್ಳುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರತಿ ವರ್ಷ ತನ್ನ ವೈಶಿಷ್ಟಪೂರ್ಣ ಸ್ತಬ್ಧಚಿತ್ರಗಳ ಮೂಲಕವೇ ದೇಶದ ಗಮನ ಸೆಳೆಯುತ್ತಿದೆ. ನಮ್ಮ ರಾಜ್ಯವು ವರ್ಷದಿಂದ ವರ್ಷಕ್ಕೆ ಹೊಸ ಮೈಲಿಗಲ್ಲನ್ನು ಸ್ಥಾಪಿಸುತ್ತಲೇ ಸಾಗಿದೆ. ಈ ಬಾರಿ ಲಕ್ಕುಂಡಿಯ ಶಿಲ್ಪಕಲೆಯಿಂದ ಕೂಡಿರುವ ಐತಿಹಾಸಿಕ ದೇವಾಲಯಗಳು ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಲು ಹೊರಟಿದೆ ಎಂದು ಇಂದು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಇಲಾಖೆಯ ಆಯುಕ್ತರಾದ ಹೇಮಂತ್ ಎಂ.ನಿಂಬಾಳ್ಕರ್ ಅವರು ನುಡಿದರು.

ಕರ್ನಾಟಕಕ್ಕೆ ಈ ಬಾರಿಯ ಗಣರಾಜ್ಯೋತ್ಸವದ ಸ್ತಬ್ಧ ಚಿತ್ರವು ಅತ್ಯಂತ ಸ್ಮರಣೀಯವಾದುದು. ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವ ನಮ್ಮ ರಾಜ್ಯದಲ್ಲಿ ಎಲ್ಲಾ ಧರ್ಮಗಳ ದೇವಾಲಯಗಳಿವೆ. ಈ ಪೈಕಿ ಐತಿಹಾಸಿಕ ಪಟ್ಟಣವಾದ ಗದಗದ ಲಕ್ಕುಂಡಿಯು ಒಂದಾಗಿದೆ. ಅಹಿಂಸಾವಾದಿಯ ನೆಲೆಬೀಡು. ಶಿಲ್ಪಕಲೆಯ ತೊಟ್ಟಿಲಾದ ಲಕ್ಕುಂಡಿಯಲ್ಲಿ ಶೈವ, ಜೈನ ಮತ್ತು ವೈಷ್ಣವ ದೇವಾಲಯಗಳಿವೆ. ಕಲಾತ್ಮಕತೆಯಿಂದ ಕಂಗೊಳಿಸುವ ಇಲ್ಲಿನ ದೇವಾಲಯಗಳು ಈ ಬಾರಿಯ ಸ್ತಬ್ಧಚಿತ್ರದಲ್ಲಿ ಅವುಗಳ ಪಡಿಯಚ್ಚಿನಂತೆ ಮೂಡಿಬಂದಿವೆ. ಜೊತೆಗೆ, ದೇವಾಲಯವೇ ಮರುಜೀವ ತಳೆದಂತಿದೆ. ರಾಜ್ಯವು ಪ್ರಸ್ತುತ ಪಡಿಸುತ್ತಿರುವ ಈ ಸ್ತಬ್ಧ ಚಿತ್ರವು ಇದೇ ಜನವರಿ 26 ರಂದು ಎಲ್ಲರ ಮನಸೂರೆಗೊಳ್ಳಲಿದೆ ಎನ್ನುವ ವಿಶ್ವಾಸ ಹೊಂದಿರುವುದಾಗಿ ಆಯುಕ್ತರು ತಿಳಿಸಿದರು.

ದೆಹಲಿಯ ಗಣರಾಜ್ಯೋತ್ಸವದ ಸ್ತಬ್ಧಚಿತ್ರದ ವಿಷಯದ ಆಯ್ಕೆ, ವಿನ್ಯಾಸ, ಕೇಂದ್ರ ಸರ್ಕಾರ ರಕ್ಷಣಾ ಇಲಾಖೆಯಲ್ಲಿ ಅದರ ಅನುಮೋದನೆ, ನಿರ್ಮಾಣ, ಪಾಲ್ಗೊಳ್ಳುವಿಕೆ ಹೀಗೆ ಎಲ್ಲಾ ಹಂತಗಳಲ್ಲೂ 'ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೇ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ. ಅಲ್ಲದೆ, ಇಲಾಖೆಯು ಕಳೆದ 15 ವರ್ಷಗಳಿಂದ ನಿರಂತರವಾಗಿ ಗಣರಾಜ್ಯೋತ್ಸವದ ಪಥಸಂಚಲನ ಮತ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಿದೆ. ಇದು ಕನ್ನಡಿಗರೆಲ್ಲರೂ ಹೆಮ್ಮೆ ಪಡುವ ಸಂಗತಿ ಎಂದು ಅವರು ತಮ್ಮ ಸಂತಸ ಹಂಚಿಕೊಂಡರು.

2025ರ ಜನವರಿ 26ರಂದು ನಡೆಯುವ ದಹೆಲಿ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸುವ ಸ್ತಬ್ಧಚಿತ್ರಕ್ಕಾಗಿ ಇಲಾಖೆಯು

1. ಲಕ್ಕುಂಡಿ : ಶಿಲ್ಪಕಲೆಯ ತೊಟ್ಟಿಲು (Lakkundi - The Cradle of Stone Craft)
2. ಮೆಕ್ಕೆಕಟ್ಟು : ಮರಕೆತ್ತನೆಯ ದೈವ ನಿಧಿ (Mekkekattu – "Wood Carved Treasures of Divinity)
3. ಕರ್ನಾಟಕದ ಸಮೃದ್ಧಿಯ ಆಚರಣೆಗಳು (Rituals of Prosperity) ಮತ್ತು
4. ಕರ್ನಾಟಕ ಒಂದು ರಾಜ್ಯ ಹಲವು ಜಗತ್ತು (Karnataka "One State. Many Worlds)

ಎಂಬ ನಾಲ್ಕು ವಿಷಯಗಳನ್ನು ಆಯ್ಕೆ ಮಾಡಿ ಕಳುಹಿಸಿತ್ತು. ಮೊದಲ ಸಭೆಯಲ್ಲಿಯೇ 'ಲಕ್ಕುಂಡಿ: ಶಿಲ್ಪಕಲೆಯ ತೊಟ್ಟಿಲು' ಎಂಬ ವಿಷಯವನ್ನು ಪರಿಣತರ ಸಮಿತಿಯು ಒಮ್ಮತದಿಂದ ಅಂತಿಮಗೊಳಿಸಿತ್ತು. ಅದಕ್ಕನುಗಣವಾಗಿ ಈ ಬಾರಿಯ ಸ್ತಬ್ಧಚಿತ್ರದಲ್ಲಿ ಲಕ್ಕುಂಡಿಯ ದೇವಾಲಯಗಳು ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತಿವೆ ಎಂದು ನಿಂಬಾಳ್ಕರ್ ಅವರು ತಿಳಿಸಿದರು.

ವಿಷಯ ಆಯ್ಕೆಯ ಬಳಿಕ ಲಕ್ಕುಂಡಿಯ ಶಿಲ್ಪಕಲೆಯ ವೈಭವವನ್ನು ಅದರ ಪ್ರತಿರೂಪದಂತೆ 'ಕೆತ್ತುವ' ಬೃಹತ್ ಸವಾಲು ಎದುರಾಗಿತ್ತು. ಕರ್ನಾಟಕದ ಬಗೆಗಿನ ಅಭಿಮಾನ, ನಾಡಿನ ಹಿರಿಮೆ ಹಾಗೂ ಸಂಸ್ಕೃತಿಯ ಮಹತ್ವವನ್ನು ಎತ್ತಿಹಿಡಿಯುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರೋತ್ಸಾಹದ ನುಡಿಗಳೇ ಈ ಸವಾಲಿನ ಕೆಲಸಕ್ಕೆ ಮುನ್ನುಡಿ ಬರೆದಿತ್ತು. ಪ್ರವಾಸೋದ್ಯಮ ಮತ್ತು ಗದುಗಿನ ಉಸ್ತುವಾರಿ ಸಚಿವರಾದ ಹೆಚ್.ಕೆ. ಪಾಟೀಲ್ ಅವರ ಮಾರ್ಗದರ್ಶನ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಬಿ.ಬಿ.ಕಾವೇರಿ ಅವರ ಸಲಹೆ –ಸೂಚನೆಗಳು ಸ್ತಬ್ಧಚಿತ್ರದ ಕೆಲಸವನ್ನು ಸುಗಮವಾಗಿಸಿತ್ತು ಎಂದು ವಾರ್ತಾ ಇಲಾಖೆಯು ಆಯುಕ್ತರು ಹೇಳಿದರು.

ಗದಗದ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಡಾ.ಶರಣು ಗೋಗೇರಿ ಅವರು ಒದಗಿಸಿದ ಛಾಯಾಚಿತ್ರಗಳು ಮತ್ತು ಮಾಹಿತಿ ಸೇರಿದಂತೆ ವಿಷಯ ಪರಿಣತರು – ತಜ್ಞರು, ಕಲಾನಿರ್ದೇಶಕರು ಮತ್ತು ಕಲಾವಿದರೊಂದಿಗೆ ಪರಾಮರ್ಶಿಸಿಕೊಂಡು ಇಲಾಖೆಯು ಈ ಕೆಲಸವನ್ನು ಕೈಗೆತ್ತಿಕೊಂಡಿತ್ತು. ಹಾಕಿಕೊಂಡ ಕಾರ್ಯತಂತ್ರದ ರೂಪುರೇಷೆಗಳಂತೆ ಈ ಸ್ತಬ್ಧಚಿತ್ರ ದಿನಗಳ ಲೆಕ್ಕದಲ್ಲಿ ಮೈದಳೆದಿದೆ. ಕಡಿಮೆ ಅವಧಿಯಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಸ್ತಬ್ಧಚಿತ್ರ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಮೂಡಿ ಬಂದಿದೆ. ಇದಕ್ಕಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೈಜೋಡಿಸಿದ ಎಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಆರಂಭದಲ್ಲಿ ದೆಹಲಿಯಲ್ಲಿ ಕವಿದಿದ್ದ ದಟ್ಟ ಮಂಜು, ಹೊಂಜು ಮತ್ತು ಮಳೆ ಎಲ್ಲವೂ ಸವಾಲುಗಳು ಕಂಡಿದ್ದವು. ಇಂದು ಅವುಗಳೆಲ್ಲವೂ ಈ ನಮ್ಮ ಸ್ತಬ್ಧಚಿತ್ರದಲ್ಲಿ ಕರಗಿ ಹೋಗಿವೆ. ಜೀವಕಳೆಯಿಂದ ಕೂಡಿರುವ ಸ್ತಬ್ಧಚಿತ್ರವನ್ನು ರಾಜ್ಯದ ಪರವಾಗಿ ಪ್ರದರ್ಶಿಸುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತದೆ ಎಂದು ತಮ್ಮ ಸಂತಸ ಹಂಚಿಕೊಂಡರು.

ವಿಷಯ ಆಯ್ಕೆಯ ಬಳಿಕ, ಸ್ತಬ್ಧಚಿತ್ರದ ಮಾದರಿ (ಕೀ ಮಾಡಲ್) ಮತ್ತು ಸಂಗೀತದ ಹಂತವನ್ನು ದಾಟಬೇಕಾಗಿತ್ತು. ಅಂತರರಾಷ್ಟ್ರೀಯ ಖ್ಯಾತಿಯ ಕಲಾನಿರ್ದೇಶಕ ಶಶಿಧರ ಅಡಪ ಅವರು ವಿನ್ಯಾಸ ಮಾಡಿಕೊಟ್ಟ ಮಾದರಿಗೆ ಆಯ್ಕೆ ಸಮಿತಿ ಮೊದಲ ಹಂತದಲ್ಲೇ ಅನುಮೋದನೆ ನೀಡಿತ್ತು. ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಅವರ 'ಕನ್ನಡ ಸಂಗೀತ' ವನ್ನು ಹಾಗೆಯೇ ಉಳಿಸಿಕೊಂಡಿದೆ. ಮೈಸೂರು, ಬೆಂಗಳೂರು, ಗದಗ ಮತ್ತು ಧಾರವಾಡದ ಕಲಾವಿದರಿಂದ ಕೂಡಿರುವ 18 ಮಂದಿ ತಂಡವನ್ನು ಕಲಾವಿದರಾದ ಲಿಂಗಯ್ಯ ಅವರು ಮುನ್ನಡೆಸುತ್ತಾರೆ. ಸ್ತಬ್ಧಚಿತ್ರದ ಇಕ್ಕೆಲಗಳಲ್ಲಿ ತಲಾ ನಾಲ್ಕು ಮಂದಿ ಮಹಿಳೆಯರು ಮತ್ತು ಪುರುಷರು ಜಗ್ಗಲಿಗೆ ಬಾರಿಸುತ್ತಾ ಮುನ್ನಡೆಯಲಿದ್ದಾರೆ. ಇನ್ನುಳಿದ 10 ಮಂದಿ ಸ್ತಬ್ಧಚಿತ್ರದ ಮೇಲುಭಾಗದಲ್ಲಿ ಪ್ರವಾಸಿಗರಾಗಿ ಕಾಣಿಸಿಕೊಳ್ಳಲಿದ್ದಾರೆ.



**ಸ್ತಬ್ಧಚಿತ್ರದಲ್ಲಿ ಏನಿರಲಿದೆ:** ಕರ್ನಾಟಕದ ಗದಗ ಜಿಲ್ಲೆಯಲ್ಲಿರುವ ಲಕ್ಕುಂಡಿಯನ್ನು ಅದರ ಅದ್ಭುತ ಕಲ್ಲಿನ ವಾಸ್ತುಶಿಲ್ಪಕ್ಕಾಗಿ 'ಶಿಲ್ಪಕಲೆಯ ತೊಟ್ಟಿಲು' ಎಂದು ಕರೆಯಲಾಗುತ್ತದೆ. ಇಲ್ಲಿನ ಸುಂದರವಾದ ದೇವಾಲಯಗಳು, ಮೆಟ್ಟಿಲು ಬಾವಿಗಳು ಮತ್ತು ಚಾಲುಕ್ಯ ರಾಜವಂಶದ ಶಾಸನಗಳಿಗೆ ನೆಲೆಯಾಗಿದೆ. ಸಾಂಸ್ಕೃತಿಕ ಶಕ್ತಿ ಕೇಂದ್ರವಾಗಿರುವುದರ ಜೊತೆಗೆ, 10 ರಿಂದ 12 ನೇ ಶತಮಾನದ ನಡುವೆ ಲಕ್ಕುಂಡಿ ಒಂದು ದೊಡ್ಡ ವಾಣಿಜ್ಯ ಕೇಂದ್ರವಾಗಿತ್ತು. ಈ ನಗರವು ಹಲವಾರು ರಾಜವಂಶಗಳಿಂದ ಆಳಲ್ಪಟ್ಟಿತ್ತಾದರೂ ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಚಾಲುಕ್ಯರ ರಾಜವಂಶ.

ಲಕ್ಕುಂಡಿಯು ಪ್ರಾಚೀನಾನ್ವೇಷಕರು ಮತ್ತು ವಾಸ್ತುಶಿಲ್ಪ ಪ್ರಿಯರ ಸ್ವರ್ಗವಾಗಿದೆ. ಇದು 50 ದೇವಾಲಯಗಳನ್ನು ಹೊಂದಿದ್ದು, ಅವುಗಳಲ್ಲಿ ಹೆಚ್ಚಿನವು ಶಿವನಿಗೆ ಸಮರ್ಪಿತವಾಗಿವೆ; 101 ಮೆಟ್ಟಿಲು ಬಾವಿಗಳು (ಕಲ್ಯಾಣಿ / ಪುಷ್ಕರಣಿ); ಮತ್ತು 29 ಶಾಸನಗಳು ಇಲ್ಲಿವೆ. ಇವುಗಳು ಕಲ್ಯಾಣಿ ಚಾಲುಕ್ಯರ ಕಲೆ, ಸಂಸ್ಕೃತಿ ಮತ್ತು ವಾಸ್ತುಶಿಲ್ಪದ ಶ್ರೇಷ್ಠತೆಯ ಸಂಕೇತವಾಗಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ನಿರ್ವಹಿಸುತ್ತಿರುವ ವಸ್ತುಸಂಗ್ರಹಾಲಯವು ಲಕ್ಕುಂಡಿಯ ಶ್ರೀಮಂತ ಶಿಲ್ಪಕಲೆಯನ್ನು ಪ್ರದರ್ಶಿಸುತ್ತಿದೆ.

ಸ್ತಬ್ಧಚಿತ್ರದ ಮುಂಭಾಗವು ಬ್ರಹ್ಮ ಜಿನಾಲಯ ದೇವಸ್ಥಾನದ ಬ್ರಹ್ಮನ ಪ್ರತಿಮೆಯನ್ನು ಹೊಂದಿದೆ. ಇದು ಲಕ್ಕುಂಡಿಯಲ್ಲಿರುವ ಅತ್ಯಂತ ಹಳೆಯ ಜೈನ ದೇವಾಲಯವಾಗಿದ್ದು ಭಗವಾನ್ ಮಹಾವೀರನಿಗೆ ಸಮರ್ಪಿತವಾಗಿದೆ. ಅದರ ನಂತರ ಬ್ರಹ್ಮ ಜಿನಾಲಯ ದೇವಸ್ಥಾನದ ತೆರೆದ ಕಂಬದ ಮಂಟಪವಿದೆ. ಸ್ತಬ್ಧಚಿತ್ರದ ಮುಖ್ಯ ವಿಭಾಗವು ಭವ್ಯವಾದ ಮತ್ತು ಅಲಂಕೃತವಾದ ಕಾಶಿ ವಿಶ್ವೇಶ್ವರ ದೇವಸ್ಥಾನ ಮತ್ತು ಶಿವನಿಗೆ ಸಮರ್ಪಿತವಾದ ನನ್ನೇಶ್ವರ ದೇವಸ್ಥಾನವನ್ನು ಪ್ರದರ್ಶಿಸುತ್ತದೆ.

ತೀವ್ರ ಪೈಪೋಟಿ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಸ್ತಬ್ಧಚಿತ್ರದೊಂದಿಗೆ ಭಾಗವಹಿಸುವುದು ಪ್ರತಿ ರಾಜ್ಯಕ್ಕೂ ಹೆಮ್ಮೆಯ ಮತ್ತು ಪ್ರತಿಷ್ಠೆಯ ಸಂಕೇತ. ಹಿಂದೆ ಎಲ್ಲಾ ರಾಜ್ಯಗಳಿಗೂ ಪಥಸಂಚಲನದಲ್ಲಿ ಭಾಗವಹಿಸಲು ಅವಕಾಶವಿತ್ತು. ಭದ್ರತೆ ಮತ್ತು ಗಣರಾಜ್ಯೋತ್ಸವದ ಅವಧಿಯಲ್ಲಿ ಮಾಡಿದ ಇಳಿಕೆ, ಪ್ರಾತಿನಿಧ್ಯತೆಯಿಂದಾಗಿ ಸ್ತಬ್ಧಚಿತ್ರಕ್ಕಾಗಿ ಪ್ರತಿನಿಧಿಸುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆಯನ್ನು ರಕ್ಷಣಾ ಸಚಿವಾಲಯ 15ಕ್ಕೆ ಇಳಿಸಿದೆ. ಇದು ತೀವ್ರ ಪೈಪೋಟಿಗೆ ಕಾರಣವಾಗಿದೆ. ಅಷ್ಟೇ ಅಲ್ಲದೆ ಗುಣಮಟ್ಟಕ್ಕೆ, ವಿನ್ಯಾಸಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಸ್ತಬ್ಧಚಿತ್ರಕ್ಕಾಗಿ ಪ್ರಶಸ್ತಿ ಪಡೆದುಕೊಳ್ಳುವುದಕ್ಕಿಂತಲೂ ಪಥಸಂಚಲನದಲ್ಲಿ ಭಾಗವಹಿಸುವುದೇ ಪ್ರತಿಷ್ಠೆಯ ಸಂಕೇತವಾಗಿದೆ. ಇಂತಹ ಕಠಿಣ ಪರೀಕ್ಷೆಯಲ್ಲಿ ಕರ್ನಾಟಕವು 15 ಬಾರಿ ಭಾಗವಹಿಸಿ, ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಪ್ರಶಸ್ತಿಗಳ ಸರಮಾಲೆ 2022ರ ಇಲಾಖೆಯು ಪ್ರದರ್ಶಿಸಿದ್ದ 'ಸಾಂಪ್ರದಾಯಿಕ ಕಸೂತಿ ತೊಟ್ಟಿಲು'ಗೆ ದ್ವಿತೀಯ ಪ್ರಶಸ್ತಿ, 2015ರಲ್ಲಿ ರಾಜ್ಯವು ಚನ್ನಪಟ್ಟದ ಗೊಂಬೆಗಳಿಗೆ ತೃತೀಯ, 2012ರಲ್ಲಿ ದಕ್ಷಿಣ ಕನ್ನಡ ಭೂತಾರಾಧನೆಗೆ ತೃತೀಯ, 2011ರಲ್ಲಿ ಬೀದರ್‌ನ ಪಾರಂಪರಿಕ ಕಲೆಯಾದ 'ಬಿದರಿ' ಸ್ತಬ್ಧಚಿತ್ರಕ್ಕೆ ದ್ವಿತೀಯ ಮತ್ತು 2008ರಲ್ಲಿ ಹೊಯ್ಸಳ ವಾಸ್ತುಶಿಲ್ಪಕ್ಕೆ ದ್ವಿತೀಯ ಪ್ರಶಸ್ತಿ ಸಂದಿತ್ತು. 2005ರಲ್ಲಿ ವೈರಾಗ್ಯ ಮೂರ್ತಿ ಬಾಹುಬಲಿಯ ಮಹಾಮಸ್ತಕಾಭಿಷೇಕದ ಸ್ತಬ್ಧಚಿತ್ರಕ್ಕೆ ಪ್ರಥಮ ಪ್ರಶಸ್ತಿ ದೊರೆತಿತ್ತು. 2008ರಲ್ಲಿ ಹೊಯ್ಸಳ ಕಲೆಯ ಸ್ತಬ್ಧಚಿತ್ರವು ದ್ವಿತೀಯ ಪ್ರಶಸ್ತಿಯ ಜೊತೆಗೆ ಅತ್ಯುತ್ತಮ ನಿರೂಪಣೆ ಮತ್ತು ಅತ್ಯುತ್ತಮ ಫ್ಯಾಬ್ರಿಕೇಷನ್‌ಗಾಗಿ ಪ್ರಶಸ್ತಿ ಲಭಿಸಿತ್ತು. ಒಂದೇ ಸ್ತಬ್ಧಚಿತ್ರಕ್ಕಾಗಿ ಮೂರು ಪ್ರಶಸ್ತಿಗಳನ್ನು ಪಡೆದಂತಹ ಅಪರೂಪದ ಸಾಧನೆಯನ್ನು ನಮ್ಮ ರಾಜ್ಯವು ಮಾಡಿದೆ.

**ಹೆಚ್ಚಿನ ಮತ್ತು ಪೂರಕ ಮಾಹಿತಿಗಾಗಿ:** ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್, ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (9448110100), ಸಿ. ಆರ್. ನವೀನ್, ಸ್ತಬ್ಧಚಿತ್ರದ ನೋಡಲ್ ಅಧಿಕಾರಿ, ವಾರ್ತಾ ಇಲಾಖೆ (9448058775), ಶಶಿಧರ ಅಡಪ, ಅಂತರರಾಷ್ಟ್ರೀಯ ಕಲಾನಿರ್ದೇಶಕ, ಸತೀಶ್ ರೈ, ಪ್ರತಿರೂಪಿ ಸಂಸ್ಥೆ (9448497073,9448497076)ಸಂಪರ್ಕಿಸಬಹುದು.


### ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
REGIONAL OFFIÇE KARNATAKA STATE POLLUTION CONTROL BOARD
ಶ್ರೀ ಸಾಯಿ ಶರಣ ಪ್ಲಾಜಾ, ನಂ.71/ಎ, 2ನೇ ಮಹಡಿ, ಕೆ.ಇ.ಬಿ. ಡ್ಯಾಂ ರಸ್ತೆ, ಹೊಸಪೇಟೆ–583203
Shree Sharana Plaza, No.71/A, 2nd Floor, KEB Dam Road, Hosapete-583203, Dist: Vijayanagara

ಮಾನಿಮಂ/304/ಹಿಪಅ/ಗಣಿ/ಪಸಾಸ/2024–25/508 ದಿನಾಂಕ: 21/01/2025

**ಪರಿಸರ ಸಾರ್ವಜನಿಕ ಆಲಿಕೆ ಸಭೆಗಾಗಿ ಅಧಿಸೂಚನೆ**

**ಮೆ. ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿಮಿಟೆಡ್** ರವರು **ವಿಜಯನಗರ ಜಿಲ್ಲೆ, ಹೊಸಪೇಟೆ ತಾಲ್ಲೂಕು, ವ್ಯಾಸನಕೆರೆ ಗ್ರಾಮದಲ್ಲಿ "ವ್ಯಾಸನಕೆರೆ ಕಬ್ಬಿಣದ ಅದಿರಿನ ಗಣಿ"**ಯಲ್ಲಿ ವಾರ್ಷಿಕ 1.8 ಮಿಲಿಯನ್ ಟನ್ ಉತ್ಪಾದನಾ ಸಾಮರ್ಥ್ಯದ ಕಬ್ಬಿಣದ ಅದಿರಿನ ಗಣಿಗಾರಿಕೆ(ಗರಿಷ್ಠ ಉತ್ಪನನವು 7.1 ಮಿಲಿಯನ್ ಟಿ.ಪಿ.ಎ. ವರೆಗೆ ಇರುತ್ತದೆ, ಇದರಲ್ಲಿ 1.8 ಮಿಲಿಯನ್ ಟಿ.ಪಿ.ಎ. ಕಬ್ಬಿಣದ ಅದಿರು ಮತ್ತು 5.3 ಮಿಲಿಯನ್ ಟಿ.ಪಿ.ಎ. ತ್ಯಾಜ್ಯ ಸೇರಿದೆ) ಯೋಜನೆಯನ್ನು ಒಟ್ಟು 405.4 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ (ಹಿಂದಿನ ಎರಡು ಗಣಿಗುತ್ತಿಗೆಗಳು (ML No. 2416–354.56 ಹೆಕ್ಟೇರ್ & ML No. 2553 – 32.72 ಹೆಕ್ಟೇರ್) ಮತ್ತು ಮೂಲರೂಪದ (ವರ್ಜಿನ್) ಪ್ರದೇಶ 18.12 ಹೆಕ್ಟೇರ್) ವಿಲೀನಗೊಳಿಸಲಾಗಿದೆ) ಕೈಗೊಳ್ಳಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ:14.09.2006ರ(ತಿದ್ದುಪಡಿ ದಿನಾಂಕ:01.12.2009) ಪ್ರಕಾರ, ಕೇಂದ್ರ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಕೇಂದ್ರಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ:F. No. IA-J-11011/231/2024-IA-II(M), ದಿನಾಂಕ:17.12.2024 ಹಾಗೂ ಉದ್ದಿಮೆಯವರು ನೀಡಿದ ನಿವೇದನೆಯ ಪತ್ರ ದಿನಾಂಕ:23.12.2024ರ ಪ್ರಕಾರ ಮತ್ತು ಪರಿಸರ ಅಧಿಕಾರಿ(ಪ್ರ), ಪ್ರಾದೇಶಿಕ ಕಛೇರಿ, ವಿಜಯನಗರಇವರ ಪತ್ರ ದಿನಾಂಕ:08.01.2025ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

**ಯೋಜನೆಯ ವಿವರಗಳು ಕಳಕಂಡಂತಿವೆ.**

| | | |
|---|---|---|
| 1 | ಕಂಪನಿಯ ಹೆಸರು ಮತ್ತು ವಿಳಾಸ | **ಮೆ. ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿಮಿಟೆಡ್** ವಿದ್ಯಾನಗರ ಅಂಚೆ ಪೆಟ್ಟಿಗೆ, ತೋರಣಗಲ್ಲು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ – 583275. |
| 2 | ಉದ್ದೇಶಿತ ಯೋಜನೆಯ ಸ್ಥಳ | ವ್ಯಾಸನಕೆರೆ ಗ್ರಾಮ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ |
| 3 | ಉದ್ದೇಶಿತ ಯೋಜನೆಯ ವಿವರ | "ವ್ಯಾಸನಕೆರೆ ಕಬ್ಬಿಣದ ಅದಿರಿನ ಗಣಿ"ಯಲ್ಲಿ ವಾರ್ಷಿಕ1.8 ಮಿಲಿಯನ್ ಟನ್ ಉತ್ಪಾದನಾ ಸಾಮರ್ಥ್ಯದ ಕಬ್ಬಿಣದ ಅದಿರಿನ ಗಣಿಗಾರಿಕೆ(ಗರಿಷ್ಠ ಉತ್ಪನನವು 7.1 ಮಿಲಿಯನ್ ಟಿ.ಪಿ.ಎ. ವರೆಗೆ ಇರುತ್ತದೆ, ಇದರಲ್ಲಿ 1.8 ಮಿಲಿಯನ್ ಟಿ.ಪಿ.ಎ. ಕಬ್ಬಿಣದ ಅದಿರು ಮತ್ತು 5.3 ಮಿಲಿಯನ್ ಟಿ.ಪಿ.ಎ. ತ್ಯಾಜ್ಯ ಸೇರಿದೆ)ಯೋಜನೆಯನ್ನು ಒಟ್ಟು405.4 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ (ಹಿಂದಿನ ಎರಡು ಗಣಿ ಗುತ್ತಿಗೆಗಳು (ML No. 2416–354.56 ಹೆಕ್ಟೇರ್& ML No. 2553 – 32.72 ಹೆಕ್ಟೇರ್) ಮತ್ತು ಮೂಲರೂಪದ (ವರ್ಜಿನ್) ಪ್ರದೇಶ 18.12 ಹೆಕ್ಟೇರ್) ವಿಲೀನಗೊಳಿಸಲಾಗಿದೆ) ಕೈಗೊಳ್ಳಲು ಉದ್ದೇಶಿಸಿರುತ್ತಾರೆ. |
| 4 | ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ. | **ದಿನಾಂಕ : 24.02.2025 (ಸೋಮವಾರ)** **ಸಮಯ : ಬೆಳಗ್ಗೆ 11:00ಗಂಟೆ** **ಸ್ಥಳ: ಯೋಜನಾ ಸ್ಥಳ (ಹಿಂದಿನ ಗಣಿ ಗುತ್ತಿಗೆ ಸಂಖ್ಯೆ: 2416), ವ್ಯಾಸನಕೆರೆ ಗ್ರಾಮ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ** |
| 5 | ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಲಭ್ಯವಿರುವ ಸ್ಥಳ. | ಅ. ಜಿಲ್ಲಾಧಿಕಾರಿಗಳ ಕಛೇರಿ, ವಿಜಯನಗರಜಿಲ್ಲೆ, ಹೋಸಪೇಟೆ<br>ಆ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ವಿಜಯನಗರಜಿಲ್ಲೆ, ಹೊಸಪೇಟೆ<br>ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ವಿಜಯನಗರ ಜಿಲ್ಲೆ, ಬಳ್ಳಾರಿ<br>ಈ. ತಹಶೀಲ್ದಾರರ ಕಾರ್ಯಲಯ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ<br>ಉ. ಗ್ರಾಮ ಪಂಚಾಯತ್ ಕಾರ್ಯಾಲಯ, ದಾನಪುರಗ್ರಾಮ ಪಂಚಾಯತ್, ಹೊಸಪೇಟೆ ತಾಲ್ಲೂಕು.<br>ಊ. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ, ಹೋಸಪೇಟೆ<br>ಋ. ಕೇಂದ್ರ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ,ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತುಎಫ್ ವಿಂಗ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034<br>ಎ. ಸಹಾಯಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು–560001. |

**ಸೂಚನೆ:** ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: https://kspcb.karnataka.gov.in/ನಲ್ಲಿ ಪಡೆಯಬಹುದು.

**ಸಹಿ/– ಸದಸ್ಯ ಕಾರ್ಯದರ್ಶಿ**
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,
ಬೆಂಗಳೂರು.


## ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳಲ್ಲಿ ಜ.25, 26ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ

■ **ಹಂಪಿ ಟೈಮ್ಸ್ ಬಳ್ಳಾರಿ**

76ನೇ ಗಣರಾಜ್ಯೋತ್ಸವದ ಅಂಗವಾಗಿ ಜಿಲ್ಲೆಯಲ್ಲಿ ಹಿಂದೂ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಧಾರ್ಮಿಕ ಸಂಸ್ಥೆಗಳು ಹಾಗೂ ದೇವಸ್ಥಾನಗಳಲ್ಲಿ ಜ.25 ಮತ್ತು ಜ.26ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಹಾಗೂ ಜ.26 ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆಯನ್ನು ಮಾಡಬೇಕು ಎಂದು ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆಯ ಸಹಾಯಕ ಆಯುಕ್ತರಾದ ಹೆಚ್.ಗಂಗಾಧರಪ್ಪ ತಿಳಿಸಿದ್ದಾರೆ.

## ನಾಲ್ವರು ಬಾಲಕಾರ್ಮಿಕ ಮಕ್ಕಳ ರಕ್ಷಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಬಾಲ ಕಾರ್ಮಿಕ ಯೋಜನೆ ಹಾಗೂ ಇತರೆ ಇಲಾಖೆಗಳ ಸಹಯೋಗದೊಂದಿಗೆ ನಗರದ ಸುಧಾಕ್ರಾಸ್, ಬಿಮ್ಸ್ ಎದುರುಗಡೆ, ವಿದ್ಯಾನಗರ ಮತ್ತು ಇತರೆ ಸ್ಥಳಗಳಲ್ಲಿ ಗ್ಯಾರೇಜ್, ಮೆಕ್ಯಾನಿಕ್ ಶಾಪ್, ಐಸ್ ಕ್ರೀಮ್ ಪಾರ್ಲರ್, ಜ್ಯೂಸ್ ಅಂಗಡಿ ಇತ್ಯಾದಿ ಉದ್ದಿಮೆಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ನಾಲ್ವರು ಬಾಲಕಾರ್ಮಿಕ ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಯೋಜನೆಯ ಯೋಜನಾಧಿಕಾರಿ ಮೌನೇಶ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಹಾಗೂ ಪ್ಯಾನ್–ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ ಅಂಗವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಪೋಲಿಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಅಧಿಕಾರಿಗಳ ತಂಡದೊಂದಿಗೆ ದಾಳಿ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## ಜ.27 ರಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಹುದ್ದೆಗಳ ದಾಖಲಾತಿ ಪರಿಶೀಲನೆ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವಿವಿಧ ಹುದ್ದೆಗಳ ನೇಮಕಗೆ ಸಂಬಂಧಿಸಿದಂತೆ ಜನವರಿ 27ರಂದು ದಾಖಲಾತಿ ಪರಿಶೀಲನೆ ನಡೆಯಲಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಹೆಚ್‌ಡಿಯು ಮತ್ತು ಐಸಿಯು ಶುಶ್ರೂಷಣಾಧಿಕಾರಿಗಳು, ಎಸ್‌ಎನ್‌ಸಿಯು ಮತ್ತು ಎನ್‌ಬಿಎಸ್‌ಯು ಶುಶ್ರೂಷಣಾಧಿಕಾರಿಗಳು ಮತ್ತು ಜೂನಿಯರ್ ಹೆಲ್ತ್ ಅಸಿಸ್ಟೆಂಟ್ ಹಾಗೂ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು www.koppal.nic.in ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಮೂಲ ದಾಖಲಾತಿ ಪರಿಶಿಲನೆಗೆ ಕಚೇರಿ ಅವಧಿಯಲ್ಲಿ ಹಾಜರಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಸ್ಕೃತಿ–ಸಾಹಿತ್ಯದಿಂದ ನಾಡಿಗೆ ಕೀರ್ತಿ

**ಮೂರನೆ ಪುಟದಿಂದ**

ಎಲ್.ಎನ್. ಮುಕುಂದರಾಜ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೊಪ್ಪಳದ ಹಿರಿಯ ಸಾಹಿತಿ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಅವರು ಅಭಿನಂದನಾ ನುಡಿಗಳನ್ನಾಡಿದರು.

ಪ್ರಶಸ್ತಿ ಪ್ರದಾನ: ಕಾರ್ಯಕ್ರಮದಲ್ಲಿ 2022ನೇ ವರ್ಷದ 'ಗೌರವ ಪ್ರಶಸ್ತಿ'ಯನ್ನು ಪ್ರೊ. ಆರ್.ಕೆ. ಹುಡಗಿ, ಅಗ್ರಹಾರ ಕೃಷ್ಣಮೂರ್ತಿ, ಡಾ.ಇಂದಿರಾ ಹೆಗ್ಗಡೆ, ರಂಜಾನ್ ದರ್ಗಾ ಹಾಗೂ ತುಂಬಾಡಿ ರಾಮಯ್ಯನವರಿಗೆ ಪ್ರದಾನ ಮಾಡಲಾಯಿತು.

2022ನೇ ವರ್ಷದ 'ಸಾಹಿತ್ಯಶ್ರೀ' ಪ್ರಶಸ್ತಿಯನ್ನು ಡಾ. ಬಂಜಗೆರೆ ಜಯಪ್ರಕಾಶ, ಡಾ. ಎಂ.ಜಿ. ಮಂಜುನಾಥ, ಡಾ. ರಾಜಶೇಖರ ಹತಗುಂದಿ, ದಾಸನೂರು ಕೂಸಣ್ಣ, ಡಾ. ಅನಸೂಯ ಕಾಂಬಳೆ, ಬಿ.ಮಹೇಶ್ ಹರವೆ, ಎಚ್.ಎನ್. ಆರತಿ, ಚಲಂ ಹಾಡ್ಲಹಳ್ಳಿ, ರೂಮಿ ಹರೀಶ್, ಡಾ. ಸಾರಿಕಾದೇವಿ ಎಲ್. ಕಾಳಗಿ ಇವರಿಗೆ ಪ್ರದಾನ ಮಾಡಲಾಯಿತು.

**ಪುಸ್ತಕ ಬಹುಮಾನ:** ಕಾರ್ಯಕ್ರಮದಲ್ಲಿ 2021ನೇ ವರ್ಷದ ಪುಸ್ತಕ ಬಹುಮಾನವನ್ನು ಚೇಮನಹಳ್ಳಿ ರಮೇಶಬಾಬು, ಡಾ. ಶೈಲೇಶ್ ಕುಮಾರ್, ಡಾ. ಗಜಾನನ ಶರ್ಮ, ಜಿ.ವಿ.ಆನಂದಮೂರ್ತಿ, ಬಿ.ಆರ್. ಪೊಲೀಸ್ ಪಾಟೀಲ್, ಭಾರತಿ ಬಿ.ವಿ., ಡಾ. ಎಸ್.ಪಿ. ಪದ್ಮಪ್ರಸಾದ್, ಡಾ. ಡೊಮಿನಿಕ್ ಡಿ., ಡಾ.ಎಚ್.ಎಸ್. ಸತ್ಯನಾರಾಯಣ, ಸಿ.ವಿ. ಶೇಷಾದ್ರಿ ಹೊಳವನಹಳ್ಳಿ, ಡಾ. ಕಿರಣ್ ವಿ.ಎಸ್., ಡಾ. ಕೆ.ಎಸ್. ನಾಗರಾಜ, ಡಾ. ಎ.ಎಸ್. ಪ್ರಭಾಕರ, ದಾದಾಪೀರ್ ಜೈಮನ್, ಮುಜಾಫರ್ ಅಸ್ಸಾದಿ, ಡಾ. ಜಿ.ಕೃಷ್ಣಪ್ಪ, ಯಶಸ್ವಿನಿ ಕದ್ರಿ ಅವರಿಗೆ ನೀಡಲಾಯಿತು.

2021ನೇ ವರ್ಷದ ಅಕಾಡೆಮಿಯ ಪುಸ್ತಕ ದತ್ತಿ ಬಹುಮಾನವನ್ನು ಅಕ್ಷಯ ಕಾಂತಬೈಲು, ಡಾ. ಶ್ರೀಧರ ಎಚ್.ಜಿ., ಸಹನಾ ಕಾಂತಬೈಲು, ಡಾ. ನಾಗ ಎಚ್. ಹುಬ್ಳಿ, ಡಾ. ಪ್ರಸಾದಸ್ವಾಮಿ ಎಸ್., ಸುಮಂಗಲಾ, ಅಕ್ಷಯ ಪಂಡಿತ್ ಹಾಗೂ ಡಾ. ಸುತಿ ಕಾಡನಕುಪ್ಪೆ ಇವರಿಗೆ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕಲಬುರಗಿ ವಿಭಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್., ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಸಂಚಾಲಕ ಅಜಮೀರ ನಂದಾಪುರ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಕೊಪ್ಪಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ ಹಾಗೂ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ ಪರಮಶಿವಮೂರ್ತಿ, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಲಾದ ಡಾ ಬಿ.ಕೆ.ರವಿ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿದಂತೆ ಇತರೆ ಅಧಿಕಾರಿಗಳು, ಸಾಹಿತಿಗಳು, ಲೇಖಕರು, ಚಿಂತಕರು ಮತ್ತು ಅನೇಕರು ಪಾಲ್ಗೊಂಡಿದ್ದರು.